# ಮೈಸೂರು ವಿಶ್ವವಿದ್ಯಾನಿಲಯ

ದಿನಾಂಕ 14–07–2020ರಂದು ಪೂರ್ವಾಹ್ನ 11.00 ಗಂಟೆಗೆ ಮೈಸೂರು ವಿಶ್ವವಿದ್ಯಾನಿಲಯದ ಕ್ರಾಫರ್ಡ್ ಭವನದ ಶೈಕ್ಷಣಿಕ ಸಭಾಂಗಣದಲ್ಲಿ ಜರುಗಿದ ಸಿಂಡಿಕೇಟಿನ ನಾಲ್ಕನೇ ಸಾಮಾನ್ಯ ಸಭೆಯ ನಡವಳಿಗಳು.

ಹಾಜರಿದ್ದ ಸದಸ್ಯರು:

| | | |
|---|---|---|
| 1 | ಪ್ರೊ. ಜಿ. ಹೇಮಂತಕುಮಾರ್ | ಕುಲಪತಿಗಳು ಹಾಗೂ ಅಧ್ಯಕ್ಷರು |
| 2 | ಆಯುಕ್ತರು, ಕಾಲೇಜು ಶಿಕ್ಷಣ ಇಲಾಖೆ, ಕರ್ನಾಟಕ ಸರ್ಕಾರ ಇವರ ಪರವಾಗಿ ಜಂಟಿ ನಿರ್ದೇಶಕರು, ಕಾಲೇಜು ಶಿಕ್ಷಣ ಇಲಾಖೆ, ಪ್ರಾದೇಶಿಕ ಕಛೇರಿ, ಮೈಸೂರು. | ಸದಸ್ಯರು |
| 3 | ಪ್ರೊ. ಡಿ. ಆನಂದ | ಸದಸ್ಯರು |
| 4 | ಶ್ರೀಮತಿ. ಸಹನಾ ಶಿವಪ್ಪ | ಸದಸ್ಯರು |
| 5 | ಶ್ರೀ ದಿನೇಶ್ ಎಂ. ಗಾವಂಕರ್ | ಸದಸ್ಯರು |
| 6 | ಶ್ರೀ ಆರ್. ಪ್ರದೀಪ್‌ಕುಮಾರ್ ದೀಕ್ಷಿತ್ | ಸದಸ್ಯರು |
| 7 | ಡಾ. ಎಸ್.ಡಿ. ದೊಡ್ಡಚಾರಿ | ಸದಸ್ಯರು |
| 8 | ಶ್ರೀಮತಿ ಪವಿತ್ರ ವೈ.ಕೆ. | ಸದಸ್ಯರು |
| 9 | ಡಾ. ಈ.ಸಿ. ನಿಂಗರಾಜ್‌ಗೌಡ | ಸದಸ್ಯರು |
| 10 | ಡಾ. ಎಂ.ಎಸ್. ದಾಮೋದರ | ಸದಸ್ಯರು |
| 11 | ಪ್ರೊ. ಕೆ.ಎಂ. ಮಹದೇವನ್ ಕುಲಸಚಿವರು (ಪರೀಕ್ಷಾಂಗ) | ಸದಸ್ಯರು. |
| 12 | ಪ್ರೊ. ಟಿ.ಎಸ್. ದೇವರಾಜ, ಹಣಕಾಸು ಅಧಿಕಾರಿಗಳು | ಸದಸ್ಯರು |
| 13 | ಪ್ರೊ. ಆರ್. ಶಿವಪ್ಪ | ಕುಲಸಚಿವರು ಹಾಗೂ ಸದಸ್ಯ ಕಾರ್ಯದರ್ಶಿಗಳು |

ಹಾಜರಾಗದ ಸದಸ್ಯರು:

1. ನಿರ್ದೇಶಕರು, ತಾಂತ್ರಿಕ ಶಿಕ್ಷಣ ಇಲಾಖೆ, ಕರ್ನಾಟಕ ಸರ್ಕಾರ.
2. ನಿರ್ದೇಶಕರು, ವೈದ್ಯಕೀಯ ಶಿಕ್ಷಣ ಇಲಾಖೆ, ಕರ್ನಾಟಕ ಸರ್ಕಾರ.
3. ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಕರ್ನಾಟಕ ಸರ್ಕಾರ.
4. ನಿರ್ದೇಶಕರು, ಪದವಿಪೂರ್ವ ಶಿಕ್ಷಣ ಇಲಾಖೆ, ಕರ್ನಾಟಕ ಸರ್ಕಾರ.
5. ಶ್ರೀ.ಟಿ.ರಾಮಕೃಷ್ಣ, ಸಿಂಡಿಕೇಟ್ ಸದಸ್ಯರು.
6. ಡಾ. ಸೈಯದ್ ಕಾಝು ಮೊಹಿದ್ದೀನ್, ಸಿಂಡಿಕೇಟ್ ಸದಸ್ಯರು.

ಮೊದಲಿಗೆ ಕುಲಸಚಿವರು ಸಭೆಗೆ ಆಗಮಿಸಿದ್ದ ಎಲ್ಲಾ ಸದಸ್ಯರುಗಳನ್ನು ಸ್ವಾಗತಿಸಿದರು ಮತ್ತು ಇದುವರೆಗೂ ಸಿಂಡಿಕೇಟ್ ಸದಸ್ಯರಾಗಿ ಸೇವೆ ಸಲ್ಲಿಸಿ ನಿರ್ಗಮಿಸಿರುವ ಶ್ರೀ ಸಿ. ಜಯರಾಮ, ಪ್ರಾಂಶುಪಾಲರು, ವಿ.ಎಂ.ಲಿಂಗಯ್ಯ, ಶಿಕ್ಷಣ ಕಾಲೇಜು, ಸೋಮನಹಳ್ಳಿ, ಮದ್ದೂರು ತಾಲ್ಲೂಕು, ಮಂಡ್ಯ ಜಿಲ್ಲೆ ಹಾಗೂ ಡಾ. ಕೆ.ಕೆ. ವಿಶಾಲಾಕ್ಷಿ, ಪ್ರಾಂಶುಪಾಲರು, ಶ್ರೀ ಕಾಗಿನೆಲೆ ಮಹಾಸಂಸ್ಥಾನ ಕನಕ ಗುರುಪೀಠ ಶಿಕ್ಷಣ ಕಾಲೇಜು, ಆದಿಚುಂಚನಗಿರಿ ರಸ್ತೆ, ಕುವೆಂಪುನಗರ ಮೈಸೂರು ಇವರುಗಳ ಸೇವೆಯನ್ನು ಸ್ಮರಿಸಿ ದಾಖಲಿಸಲಾಯಿತು.

ನಂತರ ಕಾರ್ಯಸೂಚಿಯಲ್ಲಿನ ವಿಷಯಗಳನ್ನು ಸಭೆಯಲ್ಲಿ ಮಂಡಿಸಲಾಯಿತು.

| | |
|---|---|
| ವಿಷಯ ಸಂಖ್ಯೆ -I | ದಿನಾಂಕ 23-03-2020ರಂದು ನಡೆದ ಸಿಂಡಿಕೇಟಿನ ಮೂರನೇ ಸಾಮಾನ್ಯ ಸಭೆಯಲ್ಲಿ ತೆಗೆದುಕೊಂಡ ತೀರ್ಮಾನಗಳ ಬಗ್ಗೆ ಕ್ರಮ ಕೈಗೊಂಡ ವರದಿ. |
| ತೀರ್ಮಾನ | ಗಮನಿಸಲಾಯಿತು. |
| ವಿಷಯ ಸಂಖ್ಯೆ -II | ದಿನಾಂಕ 27-05-2020 ರಂದು ನಡೆದ ಸಿಂಡಿಕೇಟಿನ ಮೂರನೇ ಸಾಮಾನ್ಯ ಸಭೆಯ ನಡಾವಳಿಗಳನ್ನು ದೃಢೀಕರಿಸುವ ಬಗ್ಗೆ. |
| ತೀರ್ಮಾನ | ಮಾನ್ಯ ಸಿಂಡಿಕೇಟ್ ಸದಸ್ಯರಾದ ಡಾ. ಈ.ಸಿ. ನಿಂಗರಾಜ್‌ಗೌಡ ರವರು ದಿನಾಂಕ 19-06-2020ರ ತಮ್ಮ ಪತ್ರದಲ್ಲಿ ಸಿಂಡಿಕೇಟಿನ ವಿಶೇಷ ಸಭೆಯಲ್ಲಿನ ವಿಷಯ ಸಂಖ್ಯೆ: 2020/5.1ಕ್ಕೆ ಸಂಬಂಧಪಟ್ಟಂತೆ ದಿನಾಂಕ 31-05-2020ರವರೆಗೆ ಖಾಲಿ ಇರುವ ಎಲ್ಲಾ ಬೋಧಕ ಹುದ್ದೆಗಳನ್ನು ಭರ್ತಿಮಾಡಿಕೊಳ್ಳುವ ಸಂಬಂಧ ಸರ್ಕಾರಕ್ಕೆ ಪತ್ರಬರೆಯಬೇಕು ಎಂದು ಚರ್ಚಿಸಿರುವ ವಿಷಯವನ್ನು ತೀರ್ಮಾನದಲ್ಲಿ ಸೇರ್ಪಡೆ ಮಾಡಿಕೊಳ್ಳುವುದರೊಂದಿಗೆ ದಿನಾಂಕ 27-05-2020ರಂದು ನಡೆದ ಸಿಂಡಿಕೇಟ್ ಸಭೆಯ ನಡಾವಳಿಗಳನ್ನು ದೃಢೀಕರಿಸಲಾಯಿತು. |
| **2020/7.1** | ಶ್ರೀ ರಾಗಿಜಡಿಮೂರ್ತಿ, ಮಾಲಿಕ್ಯೂಲರ್ ಬಯಾಲಜಿ ವಿಭಾಗ, ಯುವರಾಜ ಕಾಲೇಜು, ಮೈಸೂರು ಇವರಿಗೆ ಕಾರಣ ಕೇಳುವ ನೋಟೀಸ್ ನೀಡಲಾಗಿದ್ದು, ಈ ಪತ್ರಕ್ಕೆ ಸದರಿ ಅಭ್ಯರ್ಥಿಯು ಉತ್ತರವನ್ನು ನೀಡಿರುವ ಬಗ್ಗೆ. |
| ತೀರ್ಮಾನ | ಶ್ರೀ ರಾಗಿಜಡಿಮೂರ್ತಿ, ಮಾಲಿಕ್ಯೂಲರ್ ಬಯಾಲಜಿ ವಿಭಾಗ, ಯುವರಾಜ ಕಾಲೇಜು, ಮೈಸೂರು ಇವರಿಗೆ ದಿನಾಂಕ 23-03-2020ರ ಸಿಂಡಿಕೇಟ್ ತೀರ್ಮಾನದಂತೆ ಮಹಾಪ್ರಬಂಧ ಸಲ್ಲಿಸಲು ಕಾಲಾವಕಾಶ ನೀಡುವ ಬಗೆಗೆ ಕಾರಣ ಕೇಳುವ ನೋಟೀಸ್ ನೀಡಲಾಗಿದ್ದು, ಇದಕ್ಕೆ ಪ್ರತ್ಯುತ್ತರವಾಗಿ ಸದರಿ ಅಭ್ಯರ್ಥಿಯು ತಮ್ಮ ಸಂಶೋಧನಾ ವಿಷಯವು ಅಡಿಕೆಗೆ ಬಾಧಿಸುವ ಕೊಳೆರೋಗದ ಮೇಲೆ ಒಳಗೊಂಡಿದ್ದು, ಈ ವಿಶಿಷ್ಟ ರೋಗಾಣುವಿನ ಗುಣಲಕ್ಷಣಗಳು ಜುಲೈನಿಂದ ಸೆಪ್ಟೆಂಬರ್‌ವರೆಗೆ ಮಳೆಗಾಲದ ಮೂರು ತಿಂಗಳಲ್ಲಿ ಕಂಡುಬರುವುದರಿಂದ ಮತ್ತು ಕರ್ನಾಟಕ ಹಾಗೂ ಕೇರಳ ರಾಜ್ಯಗಳ 8ಕ್ಕೂ ಹೆಚ್ಚು ಜಿಲ್ಲೆಗಳಿಗೆ ಭೇಟಿನೀಡಿ ಕೊಳೆರೋಗಬಾಧಿತ ಅಡಿಕೆಗಳನ್ನು ಸಂಗ್ರಹಿಸುವುದು ಮತ್ತು ಅದರ ರೋಗಾಣುಗಳನ್ನು ಪ್ರಯೋಗಾಲಯದಲ್ಲಿ ಪ್ರತ್ಯೇಕಿಸಿ ನಿರ್ವಹಣೆ ಮಾಡುವುದಕ್ಕೆ ಹೆಚ್ಚಿನ ಸಮಯಾವಕಾಶ ತೆಗೆದುಕೊಳ್ಳುವ ಕೆಲಸವಾಗಿರುವುದರಿಂದ, ಮಹಾಪ್ರಬಂಧವನ್ನು ಸಲ್ಲಿಸಲು 06 ತಿಂಗಳುಗಳ ಕಾಲ ಕಾಲಾವಕಾಶವನ್ನು ಕೋರಿದ್ದ ಮನವಿಯನ್ನು ಹಾಗೂ ಈಗಾಗಲೇ 1-3-2020ಕ್ಕೆ ಏಳು ವರ್ಷಗಳು ಪೂರ್ಣಗೊಂಡಿರುವುದನ್ನು ಪರಿಶೀಲಿಸಿದ ಸಿಂಡಿಕೇಟ್ ಪ್ರಸ್ತುತ ಕೋವಿಡ್-19 ಸಾಂಕ್ರಾಮಿಕ ರೋಗವು ದೇಶದಾದ್ಯಂತ ಹರಡುತ್ತಿರುವ ಪ್ರಯುಕ್ತ ವಿಶೇಷ ಸಂದರ್ಭವೆಂದು ಪರಿಗಣಿಸಿ ಡಿಸೆಂಬರ್ 2020ರ ಅಂತ್ಯದವರೆಗೆ ಹೆಚ್ಚಿನ ಕಾಲಾವಕಾಶವನ್ನು ನೀಡಲು ಸಿಂಡಿಕೇಟ್ ಸಭೆಯು ತೀರ್ಮಾನಿಸಿತು. |

| | |
|---|---|
| **2020/7.2** | ಶ್ರೀ ರಾಮಚಂದ್ರ ಹೆಚ್.ಎಂ., ದ್ವಿತೀಯ ದರ್ಜೆ ಗುಮಾಸ್ತರು, ವಿಶ್ವವಿದ್ಯಾನಿಲಯ ಗ್ರಂಥಾಲಯ, ಮಾನಸಗಂಗೋತ್ರಿ, ಮೈಸೂರು ಇವರಿಗೆ ಸ್ವಯಂ ನಿವೃತ್ತಿ ಪಡೆಯಲು ಅನುಮತಿ ನೀಡುವ ಬಗ್ಗೆ. |
| ತೀರ್ಮಾನ | ಶ್ರೀ ರಾಮಚಂದ್ರ ಹೆಚ್.ಎಂ., ದ್ವಿತೀಯ ದರ್ಜೆ ಗುಮಾಸ್ತರು, ವಿ.ವಿ.ಗ್ರಂಥಾಲಯ, ಮಾನಸಗಂಗೋತ್ರಿ, ಮೈಸೂರು ಇವರು ದಿನಾಂಕ 29-06-1998ರಿಂದ ಖಾಯಂಗೊಂಡು 22 ವರ್ಷಗಳ ಸೇವೆಯನ್ನು ಪೂರ್ಣಗೊಳಿಸಿ ಅವರ ಸೇವಾವಧಿಯಲ್ಲಿ ವಿಶ್ವವಿದ್ಯಾನಿಲಯದಿಂದ ಯಾವುದೇ ವಿಚಾರಣೆಗೆ ಒಳಪಡದೆ ನಿಯಮಾನುಸಾರ ಸ್ವಯಂ ನಿವೃತ್ತಿ ಹೊಂದಲು ಅರ್ಹರಾಗಿರುವುದರ ಬಗ್ಗೆ ಪರಿಶೀಲಿಸಿದ ಸಿಂಡಿಕೇಟ್ ಇವರಿಂದ ವಿಶ್ವವಿದ್ಯಾನಿಲಯಕ್ಕೆ ಯಾವುದಾದರೂ ಬಾಕಿ ಬರಬೇಕಾಗಿದ್ದಲ್ಲಿ ಅವರ ಉಪದಾನ ಮತ್ತು ಇತರೆ ನಿವೃತ್ತಿ ಸೌಲಭ್ಯಗಳಿಂದ ಕಡಿತಗೊಳಿಸಲಾಗುವುದು ಎಂಬ ಷರತ್ತಿಗೊಳಪಟ್ಟು ಸದರಿಯವರಿಗೆ ದಿನಾಂಕ 31.08.2020ರಂದು ಜಾರಿಗೆ ಬರುವಂತೆ ಮೈಸೂರು ವಿಶ್ವವಿದ್ಯಾನಿಲಯದ ಉದ್ಯೋಗಿಗಳ (ಸೇವಾ ಷರತ್ತು) ಮಾರ್ಪಡಿಸಿದ ಅಧಿನಿಯಮಗಳು 1984ರ ಪ್ರಕಾರ ಹಾಗೂ ಕೆ.ಸಿ.ಎಸ್.ಆರ್. ನಿಯಮ 285(1)ರ ಪ್ರಕಾರ ಸ್ವಯಂ ನಿವೃತ್ತಿ ಪಡೆಯಲು ಸಿಂಡಿಕೇಟ್ ಅನುಮತಿಸಿತು. |
| **2020/7.3** | ಪೂಜಾ ಭಾಗವತ್ ಸ್ಮಾರಕ ಮಹಾಜನ ಶಿಕ್ಷಣ ಸಂಸ್ಥೆ, ಮೈಸೂರು ಇವರ ಸಂಸ್ಥೆಯಲ್ಲಿ ಸ್ಪೆಷಲೈಷ್ಡ್ ಪ್ರೋಗ್ರಾಂ ಅಡಿಯಲ್ಲಿ 03 ಕೋರ್ಸುಗಳನ್ನು ಹೊಸದಾಗಿ ಪ್ರಾರಂಭಿಸಲು ಮಾನ್ಯತೆ ನೀಡುವ ಸಂಬಂಧ ವಿಶ್ವವಿದ್ಯಾನಿಲಯದ ಪರಿವೀಕ್ಷಣಾ ಸಮಿತಿಯು ಸಲ್ಲಿಸಿರುವ ವರದಿಗೆ ಅನುಮೋದನೆ ಕೋರುವ ಬಗ್ಗೆ. |
| ತೀರ್ಮಾನ | ಪೂಜಾ ಭಾಗವತ್ ಸ್ಮಾರಕ ಮಹಾಜನ ಶಿಕ್ಷಣ ಸಂಸ್ಥೆ, ಮೈಸೂರು ಇವರ ಸಂಸ್ಥೆಯಲ್ಲಿ ಸ್ಪೆಷಲೈಷ್ಡ್ ಪ್ರೋಗ್ರಾಂ ಅಡಿಯಲ್ಲಿ 03 ಕೋರ್ಸುಗಳಿಗೆ ಹೊಸದಾಗಿ ಮಾನ್ಯತೆ ನೀಡುವ ಸಂಬಂಧ ದಿನಾಂಕ 19-06-2020 ರಂದು ವಿಶ್ವವಿದ್ಯಾನಿಲಯದ ತಜ್ಞರ ಸಮಿತಿಯು ಭೇಟಿ ನೀಡಿ ಸಲ್ಲಿಸಿರುವ ವರದಿಯಲ್ಲಿನ ಶಿಫಾರಸ್ಸಿನನ್ವಯ ವಿಶ್ವವಿದ್ಯಾನಿಲಯದ ಅಧಿನಿಯಮದಲ್ಲಿ ಅವಕಾಶ ಕಲ್ಪಿಸಿರುವಂತೆ ಪ್ರತಿ ಕೋರ್ಸ್‌ಗೆ 60 ವಿದ್ಯಾರ್ಥಿಗಳ ಸಂಖ್ಯಾಮಿತಿಗೊಳಪಟ್ಟು 1) B.Sc (Geology) 2) B.Sc. (Forensic Science), 3) B.,Sc (Food Processing and Quality Management) ಕೋರ್ಸ್‌ಗಳನ್ನು 2020-21ನೇ ಸಾಲಿನಿಂದ ಪ್ರಾರಂಭಿಸಲು ಸಿಂಡಿಕೇಟ್ ಅನುಮೋದಿಸಿತು. |
| **2020/7.4** | 2019-20ನೇ ಸಾಲಿನ ವಿಶ್ವವಿದ್ಯಾನಿಲಯದ ಕ್ರೀಡಾ ಸಮಿತಿ ಎರಡನೇ ಸಭೆಯ ನಡಾವಳಿಯನ್ನು ಅನುಮೋದಿಸುವ ಬಗ್ಗೆ. |
| | 2019-20ನೇ ಸಾಲಿನ ವಿಶ್ವವಿದ್ಯಾನಿಲಯದ ಕ್ರೀಡಾ ಸಮಿತಿ ಎರಡನೇ ಸಭೆಯ ನಡಾವಳಿಯ ಪುಟ ಸಂಖ್ಯೆ: 11ರ ಇತರೆ ವಿಷಯಗಳು 'ಸಿ'ನಲ್ಲಿ ವಿಶ್ವವಿದ್ಯಾನಿಲಯ ಸ್ನಾತಕೋತ್ತರ ಕ್ರೀಡಾ ಮಂಡಳಿ ಮಾನಸಗಂಗೋತ್ರಿ, ಮೈಸೂರು ಹಾಗೂ ಯುವರಾಜ ಕಾಲೇಜಿನಲ್ಲಿ ಪ್ರಸ್ತುತ ಇರುವ ಸಹಾಯಕ ದೈಹಿಕ ಶಿಕ್ಷಣ ನಿರ್ದೇಶಕರುಗಳು ನಿವೃತ್ತಿ ಹೊಂದುತ್ತಿರುವುದರಿಂದ, ಸದರಿ ಕಾಲೇಜುಗಳಿಗೆ ಇಬ್ಬರು ತಾತ್ಕಾಲಿಕ ಸಹಾಯಕ ಶಿಕ್ಷಣ ನಿರ್ದೇಶಕರನ್ನು ನೇಮಕ ಮಾಡುವ ಸಂದರ್ಭದಲ್ಲಿ ನಿವೃತ್ತರಾದವರನ್ನು ಸದರಿ ಹುದ್ದೆಗಳಿಗೆ ನೇಮಕ ಮಾಡುತ್ತಿರುವ ಬಗ್ಗೆ ಮಾನ್ಯ ಸದಸ್ಯರಾದ ಶ್ರೀ ಎಸ್.ಡಿ.ದೊಡ್ಡಚಾರಿಯವರು ಸಭೆಯ ಗಮನಕ್ಕೆ ತಂದರು ಹಾಗೂ ಸದರಿ ಹುದ್ದೆಗಳಿಗೆ ಬಿ.ಪಿ.ಎಡ್, ಎಂ.ಪಿ.ಎಡ್ ಆಗಿರುವ ಅರ್ಹ ಅಭ್ಯರ್ಥಿಗಳನ್ನು ತಾತ್ಕಾಲಿಕವಾಗಿ ಆಯ್ಕೆ ಮಾಡುವ ಬಗ್ಗೆ ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸಿದರು.<br>ನಂತರ ಕುಲಪತಿಯವರು ಮಾತನಾಡಿ, ಈ ಹಿಂದೆ ಅರ್ಹ ಅಭ್ಯರ್ಥಿಗಳು ಇಲ್ಲದಿದ್ದ ಸಂದರ್ಭದಲ್ಲಿ ಸದರಿ ಹುದ್ದೆಯಲ್ಲಿ ಕೌಶಲ್ಯವಿದ್ದ ನಿವೃತ್ತರಾದವರನ್ನು ತಾತ್ಕಾಲಿಕವಾಗಿ ನೇಮಕ ಮಾಡಲಾಗುತ್ತಿತ್ತು. ಆದರೆ ಈಗ ಅರ್ಹ ಅಭ್ಯರ್ಥಿಗಳು ಲಭ್ಯವಾಗುವುದರಿಂದ ಅಂತಹವರಲ್ಲಿ ಅರ್ಹರನ್ನು ನೇಮಕ ಮಾಡಲಾಗುವುದೆಂದು ತಿಳಿಸಿದರು. |

| | |
|---|---|
| ತೀರ್ಮಾನ | ಕ್ರೀಡಾ ಸಮಿತಿಯ ನಡಾವಳಿಯನ್ನು ಅನುಮೋದಿಸಿತು ಮತ್ತು ವಿಶ್ವವಿದ್ಯಾನಿಲಯ ಸ್ನಾತಕೋತ್ತರ ಕ್ರೀಡಾ ಮಂಡಳಿ ಮಾನಸಗಂಗೋತ್ರಿ, ಮೈಸೂರು ಹಾಗೂ ಯುವರಾಜ ಕಾಲೇಜಿನಲ್ಲಿ ಪ್ರಸ್ತುತ ಇರುವ ಸಹಾಯಕ ದೈಹಿಕ ಶಿಕ್ಷಣ ನಿರ್ದೇಶಕರುಗಳು ನಿವೃತ್ತಿ ಹೊಂದುತ್ತಿರುವುದರಿಂದ ಕಾಲೇಜುಗಳಿಗೆ ಇಬ್ಬರು ತಾತ್ಕಾಲಿಕ ಸಹಾಯಕ ಶಿಕ್ಷಣ ನಿರ್ದೇಶಕರನ್ನು ನೇಮಕ ಮಾಡುವ ಸಂದರ್ಭದಲ್ಲಿ ನಿವೃತ್ತರಾದವರನ್ನು ಪರಿಗಣಿಸದೇ ಹೊಸದಾಗಿ ಅರ್ಹ ಅಭ್ಯರ್ಥಿಗಳನ್ನು ಆಯ್ಕೆ ಮಾಡಲು ಸಿಂಡಿಕೇಟ್ ಸಭೆಯು ಅನುಮೋದಿಸಿತು. |
| **2020/7.5** | **ನಿವೃತ್ತ ಲೆಕ್ಕಪರಿಶೋಧನಾಧಿಕಾರಿಯವರನ್ನು ತಾತ್ಕಾಲಿಕವಾಗಿ ಒಂದು ವರ್ಷದ ಅವಧಿಗೆ ನೇಮಕ ಮಾಡಿಕೊಂಡಿರುವುದನ್ನು ಸಿಂಡಿಕೇಟ್ ಸಭೆಯ ಅವಗಾಹನೆಗಾಗಿ ಹಾಗೂ ಅನುಸಮರ್ಥನೆಗಾಗಿ.** |
| ತೀರ್ಮಾನ | ಸರ್ಕಾರದ ಅಧೀನ ಕಾರ್ಯದರ್ಶಿ, ಶಿಕ್ಷಣ ಇಲಾಖೆ (ವಿಶ್ವವಿದ್ಯಾನಿಲಯಗಳು), ಉನ್ನತ ಶಿಕ್ಷಣ ಇಲಾಖೆ, ಬೆಂಗಳೂರು ಇವರು ತಮ್ಮ ಪತ್ರ ಸಂಖ್ಯೆ: ಇಡಿ 370/ಯುಆರ್ ಸಿ/2014 ದಿನಾಂಕ 08-05-2015ರಲ್ಲಿ ಬಾಕಿ ಇರುವ ವಾರ್ಷಿಕ ವರದಿ/ಲೆಕ್ಕ ಪರಿಶೋಧನಾ ವರದಿಯನ್ನು ನಿಗಧಿತ ಅವಧಿಯಲ್ಲಿ ಕರ್ನಾಟಕ ವಿಧಾನ ಮಂಡಲಕ್ಕೆ ಸಲ್ಲಿಸಲು ಅನುವಾಗುವಂತೆ ರಾಜ್ಯ ಲೆಕ್ಕ ಪತ್ರ ಇಲಾಖೆಯ ನಿವೃತ್ತ ಲೆಕ್ಕ ಪರಿಶೋಧಕರು ಹಾಗೂ ನೌಕರರನ್ನು ತಾತ್ಕಾಲಿಕವಾಗಿ ಪಡೆದುಕೊಂಡು ನಿಗಧಿತ ಅವಧಿಯೊಳಗೆ ವಿಶ್ವವಿದ್ಯಾನಿಲಯಗಳು ವಾರ್ಷಿಕ ವರದಿ ಮತ್ತು ಆಡಿಟ್/ಲೆಕ್ಕ ಪರಿಶೋಧನಾ ವರದಿಗಳನ್ನು ವಿಧಾನ ಮಂಡಲಕ್ಕೆ ಕಳುಹಿಸಲು ಕ್ರಮವಹಿಸಲು ನಿರ್ದೇಶಿಸಿರುವ ಹಿನ್ನೆಲೆಯಲ್ಲಿ ಶ್ರೀ ಟಿ.ವಿ.ನಟರಾಜು ಮತ್ತು ಶ್ರೀ ಆರ್.ಬಿ.ಚಿಕ್ಕತಿಮ್ಮಯ್ಯ, ನಿವೃತ್ತ ಲೆಕ್ಕ ಪರಿಶೋಧನಾಧಿಕಾರಿಗಳು, ಕರ್ನಾಟಕ ರಾಜ್ಯ ಲೆಕ್ಕ ಪರಿಶೋಧನೆ ಮತ್ತು ಲೆಕ್ಕಪತ್ರ ಇಲಾಖೆ ಇವರುಗಳನ್ನು ಮಾಹೆಯಾನ ತಲಾ ರೂ.25,000/-ಗಳಂತೆ ವೇತನವನ್ನು ನಿಗಧಿಪಡಿಸಿ, ತಾತ್ಕಾಲಿಕವಾಗಿ ಒಂದು ವರ್ಷದ ಅವಧಿಗೆ ನೇಮಕ ಮಾಡಿ ಆದೇಶ ಹೊರಡಿಸಿರುವ ವಿಶ್ವವಿದ್ಯಾನಿಲಯದ ಕ್ರಮವನ್ನು ಸಿಂಡಕೇಟ್ ಅನುಸಮರ್ಥಿಸಿತು. |
| **2020/7.6** | **Kannada Academy, 6126 Shadycreek Dr.Agoura Hills, CA-91301, USA, ಇವರ ಸಂಸ್ಥೆಯಲ್ಲಿ Specialized Programme ಅಡಿಯಲ್ಲಿ Certificate Course in Kannada Lanugauge and Culture ಕೋರ್ಸ್‌ಅನ್ನು ಹೊಸದಾಗಿ ಪ್ರಾರಂಭಿಸಲು ಮಾನ್ಯತೆ ನೀಡುವ ಸಂಬಂಧ- ವಿಶ್ವವಿದ್ಯಾನಿಲಯದ ಪರಿವೀಕ್ಷಣಾ ಸಮಿತಿಯು ಸಲ್ಲಿಸಿರುವ ವರದಿಗೆ ಅನುಮೋದನೆ ಕೋರುವ ಬಗ್ಗೆ.** |
| ತೀರ್ಮಾನ | ದಿನಾಂಕ 26-06-2020ರಂದು Kannada Academy, 6126 Shadycreek Dr.Agoura Hills, CA-91301, USA, ಇವರೊಂದಿಗೆ ಆನ್‌ಲೈನ್ ಮೂಲಕ ಈ ಸಂಸ್ಥೆಯಲ್ಲಿನ ಮೂಲ ಸೌಲಭ್ಯ ಹಾಗೂ ಕೋರ್ಸು ಪ್ರಾರಂಭದ ಉದ್ದೇಶಗಳ ಬಗ್ಗೆ ಚರ್ಚಿಸಿ, ಸಮಿತಿಯು ಸಲ್ಲಿಸಿರುವ ಪರಿಶೀಲನಾ ವರದಿಯಲ್ಲಿನ ಶಿಫಾರಸ್ಸಿನನ್ವಯ " The University of Mysore- Recognition of Foreign Universities/ Institutions-Statutes-2008"ನಲ್ಲಿ ಅವಕಾಶ ಕಲ್ಪಿಸಿರುವಂತೆ ಸದರಿ ಸಂಸ್ಥೆಯಲ್ಲಿ 2020-2021ನೇ ಸಾಲಿನಿಂದ Specialized Programme ಅಡಿಯಲ್ಲಿ Certificate Course in Kannada Language and Culture ಕೋರ್ಸ್ ಅನ್ನು 40 ವಿದ್ಯಾರ್ಥಿಗಳ ಸಂಖ್ಯಾಮಿತಿಯೊಂದಿಗೆ ಪ್ರಾರಂಭಿಸಲು ಸಿಂಡಿಕೇಟ್ ಅನುಮೋದಿಸಿತು. |
| **2020/7.7** | **Ayur Matam Acdemic Institute of Ayurveda & Yogic Sciences, Mysuru ಇವರ ಸಂಸ್ಥೆಯಲ್ಲಿ ಅಡಿಯಲ್ಲಿ ಮಾನ್ಯತೆ ಪಡೆದಿರುವ ಕೋರ್ಸುಗಳ ನಾಮಾಂಕಿತದಲ್ಲಿ ಬದಲಾವಣೆ ಮಾಡುವ ಬಗ್ಗೆ - ಅನುಸಮರ್ಥನೆಗೆ** |
| | Ayur Matam Academic Institute of Ayurveda & Yogic Sciences, |

| | |
|---|---|
| | **Mysuru** ಇವರ ಸಂಸ್ಥೆಯಲ್ಲಿ ಸ್ಪೆಷಲೈಸ್ಡ್ ಪ್ರೋಗ್ರಾಂ ಅಡಿಯಲ್ಲಿ ಮಾನ್ಯತೆ ಪಡೆದಿರುವ ಕೋರ್ಸುಗಳ ನಾಮಾಂಕಿತದಲ್ಲಿ ಈ ಕೆಳಕಂಡಂತೆ ಮತ್ತೊಮ್ಮೆ ಬದಲಾವಣೆ ಮಾಡಿಕೊಡಬೇಕೆಂದು ಪತ್ರದಲ್ಲಿ ಕೋರಿರುತ್ತಾರೆ.<br>**1. B.Sc (Ayurveda Science & Traditional Art).**<br>**2. Diploma in Ayurveda Panchajkarnma Therapy and Yoga Science.**<br>**3. PG Diploma in Ayurveda Marma Chikitsa Therapy Science.**<br>**4. Certificate in Ayurveda Panchakarma Therapy Science.**<br>**5. Certificate Course in Kalaripayattu.**<br><br>ಡಾ. ಎಸ್. ಡಿ. ದೊಡ್ಡಚಾರಿಯವರು, ಸ್ಪೆಷಲೈಸ್ಡ್ ಪ್ರೋಗ್ರಾಂ ಅಡಿಯಲ್ಲಿ ಮಾನ್ಯತೆ ಪಡೆದಿರುವ ಕೋರ್ಸುಗಳ ನಾಮಾಂಕಿತದಲ್ಲಿ ಬದಲಾವಣೆ ಮಾಡುವ ಬಗ್ಗೆ ಆಯುಷ್ ಇಲಾಖೆಯಿಂದ ಅನುಮತಿ ಪಡೆಯಲಾಗಿದೆಯೇ ಎಂಬುದಾಗಿ ಹಾಗೂ ಶ್ರೀ. ಆರ್. ಪ್ರದೀಪ್‌ಕುಮಾರ್ ದೀಕ್ಷಿತ್‌ರವರು, ಯುಜಿಸಿ ನಿಯಮದಲ್ಲಿ ಈ ರೀತಿ ಬದಲಾವಣೆ ಮಾಡಲು ಅವಕಾಶವಿದೆಯೇ ಎಂಬುದರ ಬಗ್ಗೆ ಸ್ಪಷ್ಟೀಕರಿಸಬೇಕೆಂದು ಕೋರಿದರು.<br>ಮಾನ್ಯ ಡಾ. ಈ.ಸಿ. ನಿಂಗರಾಜ್‌ಗೌಡರವರು ಮಾತನಾಡಿ, ಯಾವುದೇ ಕೋರ್ಸುಗಳನ್ನು ಬದಲಾವಣೆ ಮಾಡುವಾಗ ಯುಜಿಸಿ ನಿಯಮ, ವಿ.ವಿ.ಅಧಿನಿಯಮ ಹಾಗೂ ಸರ್ಕಾರದ ನಿಯಮಗಳ ಅಡಿಯಲ್ಲಿ ವಿಶ್ವವಿದ್ಯಾನಿಲಯಕ್ಕೆ ತೊಂದರೆ ಆಗದಂತೆ ಕ್ರಮವನ್ನು ಕೈಗೊಳ್ಳಬೇಕು ಎಂದು ಸಭೆಗೆ ತಿಳಿಸಿದರು.<br>ನಂತರ ಮಾನ್ಯ ಕುಲಪತಿಯವರು ಮಾತನಾಡಿ, ವಿಶ್ವವಿದ್ಯಾನಿಲಯವು ನಡೆಸುತ್ತಿರುವ ಸ್ಪೆಷಲೈಸ್ಡ್ ಪ್ರೋಗ್ರಾಂ ಅಡಿಯಲ್ಲಿ ಬಿ.ಎಸ್ಸಿ. ಕೋರ್ಸಿಗೆ ಮಾತ್ರ ಬದಲಾವಣೆ ಮಾಡಲು ಯುಜಿಸಿ ನಿಯಮದಲ್ಲಿ ಅವಕಾಶವಿರುವುದರಿಂದ ಸದರಿ ಕೋರ್ಸುಗಳನ್ನು ಬದಲಾವಣೆ ಮಾಡಬಹುದಾಗಿದೆ. ಇದರಿಂದ ವಿಶ್ವವಿದ್ಯಾನಿಲಯಕ್ಕೆ ಯಾವುದೇ ಧಕ್ಕೆಯಾಗುವುದಿಲ್ಲ. ಮತ್ತು ಬದಲಾವಣೆ ಮಾಡಿರುವ ಕ್ರಮದ ಬಗ್ಗೆ ಸದರಿ ಸಂಸ್ಥೆಗೆ ಪತ್ರ ಬರೆಯಲಾಗುವುದೆಂದರು. |
| **ತೀರ್ಮಾನ:** | **Ayur Matam Academic Institute of Ayurveda & Yogic Sciences, Mysuru** ಈ ಸಂಸ್ಥೆಯಲ್ಲಿ ನಡೆಸಲಾಗುವ ಕೋರ್ಸುಗಳ ನಾಮಾಂಕಿತದಲ್ಲಿ ಬದಲಾವಣೆ ಮಾಡಿ ಅಧಿಸೂಚನೆ ಹೊರಡಿಸಿರುವ ವಿಶ್ವವಿದ್ಯಾನಿಲಯದ ಕ್ರಮವನ್ನು ಸಿಂಡಿಕೇಟ್ ಅನುಸಮರ್ಥಿಸಿತು ಹಾಗೂ ಸದರಿ ಕೋರ್ಸುಗಳ ನಾಮಾಂಕಿತದಲ್ಲಿ **Therapy** ಪದ ಬಿಟ್ಟಿರುವುದರಿಂದ ಇದನ್ನು ಸೇರಿಸಿ ಬದಲಾವಣೆ ಮಾಡಿರುವ ಬಗ್ಗೆ ಮೇಲ್ಕಂಡ ಸಂಸ್ಥೆಗೆ ಪತ್ರ ಬರೆಯಲು ಸಭೆಯು ತೀರ್ಮಾನಿಸಿತು. |
| **2020/7.8** | **Teresian College No. 1824, Bannur Road, Siddarthanagar, Mysuru** ಇವರು ಈಗಾಗಲೇ ವಿಶ್ವವಿದ್ಯಾನಿಲಯದಿಂದ ಮಾನ್ಯತೆ ಪಡೆದು **Biotechnology** ವಿಷಯದಲ್ಲಿ ನಡೆಸುತ್ತಿರುವ ಸಂಶೋಧನಾ ಕಾರ್ಯದ ಜೊತೆಗೆ ಹೆಚ್ಚುವರಿಯಾಗಿ **Commerce** ವಿಷಯಕ್ಕೆ ಸಂಶೋಧನಾ ಮಾನ್ಯತೆ ನೀಡುವ ಬಗ್ಗೆ– ಪರಿವೀಕ್ಷಣಾ ಸಮಿತಿಯವರು ಸಲ್ಲಿಸಿರುವ ವರದಿಗೆ ಅನುಮೋದನೆ ಕೋರುವ ಬಗ್ಗೆ. |
| **ತೀರ್ಮಾನ:** | ದಿನಾಂಕ 30–06–2020ರಂದು **Teresian College No. 1824, Bannur Road, Siddarthanagar, Mysuru** ಇಲ್ಲಿಗೆ ವಿಶ್ವವಿದ್ಯಾನಿಲಯದ ತಜ್ಞರ ಪರಿವೀಕ್ಷಣಾ ಸಮಿತಿಯು ಭೇಟಿ ನೀಡಿ ಸಲ್ಲಿಸಿರುವ ವರದಿಯಲ್ಲಿನ ಶಿಫಾರಸ್ಸಿನನ್ವಯ 2020–21ನೇ ಸಾಲಿನಿಂದ **Commerce** ವಿಷಯದಲ್ಲಿ ಸಂಶೋಧನಾ ಅಧ್ಯಯನ ಕೈಗೊಳ್ಳಲು ಮಾನ್ಯತೆ ನೀಡುವ ಬಗೆಗಿನ ಪ್ರಸ್ತಾವನೆಯನ್ನು ಸಿಂಡಿಕೇಟ್ ಸಭೆಯು ಅನುಮೋದಿಸಿತು. |

| | |
|---|---|
| **2020/7.9** | ಯೋಜನೆ, ಉಸ್ತುವಾರಿ ಮತ್ತು ಮೌಲ್ಯಮಾಪನ ಮಂಡಳಿ ಸಭೆಯ ನಡಾವಳಿಗೆ ಸಿಂಡಿಕೇಟ್ ಸಭೆಯ ಅನುಮೋದನೆ ಕೋರುವ ಬಗ್ಗೆ. |
| **ತೀರ್ಮಾನ:** | ದಿನಾಂಕ 19-06-2020 ರಂದು ನಡೆದ ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ ಕಾಯ್ದೆ 2000ದ ಪ್ರಕರಣ 35(3)ರ ಪ್ರಕಾರ, ಮಂಡಳಿಯ ಸಭೆಯ ನಡಾವಳಿಯನ್ನು ಸಿಂಡಿಕೇಟ್ ಸಭೆಯು ಪರಿಶೀಲಿಸಿ ಅನುಮೋದಿಸಿತು. |
| **2020/7.10** | ಹಣಕಾಸು ಸಮಿತಿಗೆ ಒಬ್ಬರು ಸಿಂಡಿಕೇಟಿನ ಸದಸ್ಯರನ್ನು ನಾಮನಿರ್ದೇಶನ ಮಾಡಿರುವ ವಿಷಯವನ್ನು ಸಿಂಡಿಕೇಟಿನ ಅನುಸಮರ್ಥನೆಗಾಗಿ. |
| **ತೀರ್ಮಾನ:** | ಡಾ. ಎಸ್.ಮದಿಅಳಗನ್, ಹಣಕಾಸು ಸಮಿತಿಯ ಸದಸ್ಯರು, ಇವರ ಸದಸ್ಯತ್ವದ ಅವಧಿಯು ದಿನಾಂಕ 26-05-2020ಕ್ಕೆ ಮುಕ್ತಾಯಗೊಂಡಿರುವುದರಿಂದ, ಇವರ ಸದಸ್ಯತ್ವದ ಸ್ಥಾನಕ್ಕೆ ಶ್ರೀ ದೊಡ್ಡಾಚಾರಿ, ಮಾನ್ಯ ಸಿಂಡಿಕೇಟ್ ಸದಸ್ಯರು ಇವರನ್ನು ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ ಕಾಯ್ದೆ 2000, ಪ್ರಕರಣ 32(1)(v)ರ ಪ್ರಕಾರ, ದಿನಾಂಕ 29-06-2020ರಂದು ಹಣಕಾಸು ಸಮಿತಿಯ ಸದಸ್ಯರನ್ನಾಗಿ ನಾಮನಿರ್ದೇಶನ ಮಾಡಿರುವ ವಿಶ್ವವಿದ್ಯಾನಿಲಯದ ಕ್ರಮವನ್ನು ಸಿಂಡಿಕೇಟ್ ಸಭೆಯು ಅನುಸಮರ್ಥಿಸಿತು. |
| **2020/7.11** | ಶ್ರೀ ಆರ್. ಪ್ರದೀಪ್ ಕುಮಾರ್ ದೀಕ್ಷಿತ್, ಮಾನ್ಯ ಸಿಂಡಿಕೇಟ್ ಸದಸ್ಯರು ಸಲ್ಲಿಸಿರುವ ಸ್ನಾತಕೋತ್ತರ ಕೇಂದ್ರ, ಸುವರ್ಣ ಗಂಗೋತ್ರಿ, ಚಾಮರಾಜನಗರ ಇಲ್ಲಿನ ಸಮಗ್ರ ಅಭಿವೃದ್ಧಿಯ ಬಗ್ಗೆ.<br>1. ಸಿದ್ದಪ್ಪಾಜಿ, ಮಂಟೆಸ್ವಾಮಿ ಮತ್ತು ರಾಚಪ್ಪಾಜಿ ಪೀಠಗಳ ಕುರಿತು.<br>2. ಎಂ.ಬಿ.ಎ ಮತ್ತು ಇಂಗ್ಲೀಷ್ ಕೋರ್ಸ್‌ಗಳ ಬಗೆಗೆ |
| | ಶ್ರೀ ಆರ್. ಪ್ರದೀಪ್ ಕುಮಾರ್ ದೀಕ್ಷಿತ್, ಸಿಂಡಿಕೇಟ್ ಸದಸ್ಯರು, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು ಇವರು ದಿನಾಂಕ 15-6-2020ರ ತಮ್ಮ ಪತ್ರದಲ್ಲಿ ಚಾಮರಾಜನಗರ ಜಾನಪದ ತವರೂರು. ಇದು ಅನೇಕ ದಾರ್ಶನಿಕ ನೆಲೆಬೀಡಾಗಿರುವುದರಿಂದ ಕರ್ನಾಟಕ ಸರ್ಕಾರ ಕನ್ನಡ ಮತ್ತು ಸಂಸ್ಕೃತಿ ಇಲಾಖೆವತಿಯಿಂದ ಶ್ರೀ ಮಂಟೇಸ್ವಾಮಿ, ಸಿದ್ದಪ್ಪಾಜಿ ಹಾಗೂ ರಾಚಪ್ಪಾಜಿ ಇವರ ಹೆಸರಿನಲ್ಲಿ ಅಧ್ಯಯನ ಪೀಠವನ್ನು ಸ್ಥಾಪಿಸಲು ಅನುದಾನವನ್ನು ಬಿಡುಗಡೆ ಮಾಡಿರುವುದನ್ನು ಚಾಮರಾಜನಗರ ಸ್ನಾತಕೋತ್ತರ ಕೇಂದ್ರದಲ್ಲಿ ಸ್ಥಾಪಿಸಲು ಕೋರಿರುವುದನ್ನು ಸಭೆಯು ಕೂಲಂಕಷವಾಗಿ ಪರಿಶೀಲಿಸಿ ಈ ಕೆಳಕಂಡಂತೆ ನಿರ್ಣಯವನ್ನು ಕೈಗೊಂಡಿತು.<br>ಶ್ರೀ ಆರ್. ಪ್ರದೀಪ್ ಕುಮಾರ್ ದೀಕ್ಷಿತ್, ಸಿಂಡಿಕೇಟ್ ಸದಸ್ಯರು, ಇವರು ಮಾತನಾಡಿ, ಸರ್ಕಾರ ಬಿಡುಗಡೆ ಮಾಡಿರುವ ಹಣದಲ್ಲಿ ಪೀಠವನ್ನು ಸ್ಥಾಪನೆ ಮಾಡುವುದು ಸೂಕ್ತವೆಂದರು. |
| **ತೀರ್ಮಾನ:** | 1. ಈಗಾಗಲೇ ಸರ್ಕಾರವು ಈ ಉದ್ದೇಶಕ್ಕಾಗಿ ಮಂಜೂರು ಮಾಡಿರುವ ರೂ.30.00 ಲಕ್ಷಗಳ ಹಣವನ್ನು ಭದ್ರತಾ ಠೇವಣಿಯನ್ನಾಗಿ ಇಟ್ಟು ಉಳಿದ 70.00ಲಕ್ಷ.ರೂಗಳ ಅನುದಾನವನ್ನು ಮಂಜೂರು ಮಾಡುವಂತೆ ಕೋರಿ ಒಟ್ಟಾರೆ 1.00 ಕೋಟಿ ರೂಪಾಯಿಗಳ ಪ್ರಸ್ತಾವನೆಯನ್ನು ಸರ್ಕಾರಕ್ಕೆ ಸಲ್ಲಿಸಲು;<br>2. ಸದರಿ ಪೀಠಗಳ ಕಾರ್ಯಚಟುವಟಿಕೆಗಳ ಉಸ್ತುವಾರಿಯನ್ನು ನೋಡಿಕೊಳ್ಳಲು ಒಬ್ಬರು ಮುಖ್ಯಸ್ಥರನ್ನು ನೇಮಕ ಮಾಡಿ ಮತ್ತು ಇದಕ್ಕಾಗಿ ವಿಶ್ವವಿದ್ಯಾನಿಲಯದ ವತಿಯಿಂದ ಪೀಠದ ಕಾರ್ಯಚಟುವಟಿಕೆಗಾಗಿ ರೂ.3,00,000/-ಗಳನ್ನು ಬಿಡುಗಡೆ ಮಾಡಲು;<br>3. ನಿಯಮಾನುಸಾರ ಎ.ಐ.ಸಿ.ಟಿ.ಇ.ಯಿಂದ ಅನುಮತಿ ಪಡೆದು ಹಾಸನ ಸ್ನಾತಕೋತ್ತರ ಕೇಂದ್ರದಲ್ಲಿ ಎಂ.ಬಿ.ಎ ಕೋರ್ಸ್‌ನ್ನು ಚಾಮರಾಜನಗರದ ಸ್ನಾತಕೋತ್ತರ ಕೇಂದ್ರದಲ್ಲಿ ಎಂ.ಬಿ.ಎ ಮತ್ತು ಇಂಗ್ಲೀಷ್ ಸ್ನಾತಕೋತ್ತರ ಕೋರ್ಸ್‌ಗಳನ್ನು ಮುಂದಿನ ಶೈಕ್ಷಣಿಕ ವರ್ಷದಿಂದ ಪ್ರಾರಂಭಿಸಿ ವಿದ್ಯಾರ್ಥಿಗಳಿಗೆ ಪ್ರವೇಶ ನೀಡುವ ಜವಾಬ್ದಾರಿಯನ್ನು |

| | |
|---|---|
| | ಡಾ.ಆನಂದ್‌ರವರಿಗೆ ವಹಿಸಲು ಸಿಂಡಿಕೇಟ್ ತೀರ್ಮಾನಿಸಿತು. |
| **2020/7.12** | **ಗಣಿತಶಾಸ್ತ್ರ ಅಧ್ಯಯನ ವಿಭಾಗ, ವಾಣಿಜ್ಯಶಾಸ್ತ್ರ ಅಧ್ಯಯನ ವಿಭಾಗ, ತತ್ವಶಾಸ್ತ್ರ ಅಧ್ಯಯನ ವಿಭಾಗ, ರಸಾಯನಶಾಸ್ತ್ರ ಅಧ್ಯಯನ ವಿಭಾಗ ಮತ್ತು ಸಾರ್ವಜನಿಕ ವ್ಯವಹಾರ ಅಧ್ಯಯನ ವಿಭಾಗಗಳಿಗೆ ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ ಕಾಯ್ದೆ 2000 ಪ್ರಕರಣ 34(7)ರ ರೀತ್ಯಾ ಎರಡು ವರ್ಷಗಳ ಅವಧಿಗೆವಿಭಾಗಾಧ್ಯಕ್ಷರುಗಳನ್ನು ನೇಮಕ ಮಾಡಿರುವ ಬಗ್ಗೆ ನಾಲ್ಕನೇ ಸಿಂಡಿಕೇಟಿನ ಸಭೆಯ ಅನುಸಮರ್ಥನೆಗಾಗಿ.** |
| **ತೀರ್ಮಾನ:** | ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ ಕಾಯ್ದೆ 2000 ಪ್ರಕರಣ 34(7)ರ ರೀತ್ಯಾ ವಿಶ್ವವಿದ್ಯಾನಿಲಯದ ವಿವಿಧ ವಿಷಯಗಳಲ್ಲಿನ ಅಧ್ಯಯನ ವಿಭಾಗಗಳಿಗೆ ವಿಭಾಗಾಧ್ಯಕ್ಷರುಗಳನ್ನು ನೇಮಕ ಮಾಡಿರುವುದನ್ನು ಪರಿಶೀಲಿಸಿದ ಸಭೆಯು ವಿಶ್ವವಿದ್ಯಾನಿಲಯದ ಕ್ರಮವನ್ನು ಸಿಂಡಿಕೇಟ್ ಅನುಸಮರ್ಥಿಸಿತು |
| **2020/7.13** | **Disciplinary action against Prof.R.Rajanna, Professor of History, Manasagangothri, Mysore-framing of charges- reg.** |
| **Decision** | **The Syndicate has taken note of the charge sheet framed against Prof.R.Rajanna as per the directions given by the office of Karnataka Governor's Secretariat vide letter bearing No.GS 09 MUM 2018 dated 09-03-2020.**<br>**In continuation to this Prof.R.Rajanna has submitted an explanation in detail and the same is also considered by the Syndicate thoroughly.**<br>**Upon considering the aforesaid explanation and all the relevant circumstances and having regard to the past service rendered by Prof.R.Rajanna as Registrar of University of Mysore without any blemish, resolved to warn him to be very careful in dealing with the correspondences from the highest office viz., the Hon'ble Chancellor's Office.**<br>**Since it is first of its kind in the office of the Registrar, the Syndicate unanimously resolved to warn him this time and submit this decision to the office of the Governor's Secretariat and request kindly to close the matter with an assurance that this University shall cause more care and proper attention to the communications from their office.**<br>**As such, the Syndicate has unanimously decided not to take disciplinary action against Prof. R.Rajanna in view of the above circumstances.**<br>**The Syndicate further resolved to request once again to the Chancellor's office to treat this matter as an isolated issue.** |
| **2020/7.14** | **ಮೈಸೂರು ವಿಶ್ವವಿದ್ಯಾನಿಲಯದ 100ನೇ ಘಟಿಕೋತ್ಸವದ ಸವಿನೆನಪಿಗಾಗಿ "ಮೈಸೂರು ವಿಶ್ವವಿದ್ಯಾನಿಲಯದ ವಿವಿದ್ಧದ್ದೋಶ ಸಮುದಾಯ ಭವನ" ನಿರ್ಮಿಸಬೇಕೆಂದು ಕೋರಿರುವ ಬಗ್ಗೆ.** |
| | ಮೈಸೂರು ವಿಶ್ವವಿದ್ಯಾನಿಲಯದಿಂದ ವಿದ್ಯಾರ್ಥಿಗಳಿಗೆ, ಸಂಶೋಧಕರಿಗೆ ಬೋಧಕ/ ಬೋಧಕೇತರ ಉದ್ಯೋಗಿಗಳಿಗೆ ಹಾಗೂ ಸಾರ್ವಜನಿಕರ ಅನುಕೂಲಕ್ಕಾಗಿ "ಮೈಸೂರು ವಿಶ್ವವಿದ್ಯಾನಿಲಯದ ವಿವಿಧದೊದ್ದೇಶ ಸಮುದಾಯ ಭವನ" ನಿರ್ಮಿಸುವುದರಿಂದ ಎಲ್ಲರಿಗೂ ಅನುಕೂಲವಾಗುವುದರ ಜೊತೆಗೆ ವಿಶ್ವವಿದ್ಯಾನಿಲಯಕ್ಕೆ ಆಂತರಿಕ ಆರ್ಥಿಕ ಸಂಪನ್ಮೂಲಕ್ಕೆ ಸಹಾಯವಾಗುವುದರಿಂದ, ಸೂಕ್ತ ಸ್ಥಳದಲ್ಲಿ ಸಮುದಾಯ ಭವನ ನಿರ್ಮಾಣ ಮಾಡಬೇಕೆಂದು ಕೋರಿರುವ ಡಾ. ಈ.ಸಿ. |

| | |
|---|---|
| | ನಿಂಗರಾಜ್‌ಗೌಡ, ಮಾನ್ಯ ಸಿಂಡಿಕೇಟ್ ಸದಸ್ಯರು ಇವರ ಮನವಿಯನ್ನು ಸಿಂಡಿಕೇಟ್ ಸಭೆಯು ಪರಿಶೀಲಿಸಿತು. *********/ |
| **ತೀರ್ಮಾನ:** | ಮೈಸೂರು ವಿಶ್ವವಿದ್ಯಾನಿಲಯವು 100ನೇ ಘಟಿಕೋತ್ಸವ ವರ್ಷಾಚರಣೆಯನ್ನು ಆಚರಿಸುತ್ತಿರುವ ಸಂದರ್ಭದ ನೆನಪಿನಲ್ಲಿ ವಿಶ್ವವಿದ್ಯಾನಿಲಯದ 100ನೇ ಘಟಿಕೋತ್ಸವ ಭವನ ಎಂದು ಅಲ್ಪಬದಲಾವಣೆ ಮಾಡಿ ಸರ್ಕಾರಕ್ಕೆ ಸೂಕ್ತ ಪ್ರಸ್ತಾವನೆಯನ್ನು ಸಲ್ಲಿಸಲು ಸಭೆಯು ತೀರ್ಮಾನಿಸಿತು. |
| **2020/7.15** | **Committee for the Development of Science Education in Schools"(CDSS) ಎಂಬುದನ್ನು "Centre for Science Education in School (CSES)" ಎಂದು ಬದಲಾಯಿಸುವ ಬಗ್ಗೆ.** |
| **ತೀರ್ಮಾನ:** | ಅಧ್ಯಕ್ಷರು, ಸಿ.ಡಿ.ಎಸ್.ಎಸ್., ಮಾನಸಗಂಗೋತ್ರಿ, ಮೈಸೂರು ಇವರು ತಮ್ಮ ಪತ್ರದಲ್ಲಿ ವಿವರಿಸಿರುವಂತೆ ಇದರ ಕಾರ್ಯಚಟುವಟಿಕೆಗಳನ್ನು ಪರಿಣಾಮಕಾರಿಯಾಗಿ ಹಮ್ಮಿಕೊಳ್ಳುವ ಉದ್ದೇಶದಿಂದ ಅವರು ಕೋರಿರುವಂತೆ "Committee for the Development of Science Education in Schools"(CDSS) ಎಂಬುದನ್ನು "Centre for Science Education in Schools (CSES)" ಎಂದು ಬದಲಾಯಿಸಲು ಸಿಂಡಿಕೇಟ್ ಅನುಮೋದಿಸಿತು. |
| **2020/7.16** | ಶ್ರೀಕಂಠಸ್ವಾಮಿ, ನಿರ್ದೇಶಕರು, ಕಾಲೇಜು ಅಭಿವೃದ್ಧಿ ಮಂಡಳಿ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು ಇವರ ನಿರ್ದೇಶಕರ ಸ್ಥಾನದ ಸೇವಾವಧಿಯು ಕೊನೆಗೊಳ್ಳುತ್ತಿರುವ ಸಂಬಂಧ ನೇಮಕಾತಿಗೆ ಹೊಸದಾಗಿ ಪ್ರಕಟಣೆಯನ್ನು ಹೊರಡಿಸುವ ಬಗ್ಗೆ. |
| | ಶ್ರೀಕಂಠಸ್ವಾಮಿ, ನಿರ್ದೇಶಕರು, ಕಾಲೇಜು ಅಭಿವೃದ್ಧಿ ಮಂಡಳಿ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು ಇವರ ನಿರ್ದೇಶಕರ ಹುದ್ದೆಯ ಸೇವಾವಧಿಯು ದಿನಾಂಕ 16-07-2020ಕ್ಕೆ ಕೊನೆಗೊಳ್ಳುತ್ತಿರುವ ಹಿನ್ನೆಲೆಯಲ್ಲಿ ಶ್ರೀಯುತರು ವಿಶ್ವವಿದ್ಯಾನಿಲಯಕ್ಕೆ ಪತ್ರ ಬರೆದು, ತಮ್ಮ ಪತ್ರದಲ್ಲಿ ಸದರಿ ಕೇಂದ್ರದಲ್ಲಿ ಇನ್ನೂ ಹಲವಾರು ಕೆಲಸಕಾರ್ಯಗಳು ಬಾಕಿ ಇರುವುದರ ಬಗ್ಗೆ ಪಟ್ಟಿ ಮಾಡಿ ತಿಳಿಸಿ, ತಾತ್ಕಾಲಿಕವಾಗಿ ಸದರಿ ಮಂಡಳಿಯ ನಿರ್ದೇಶಕರನ್ನಾಗಿ ಮುಂದುವರೆಸಬೇಕೆಂದು ಕೋರಿರುವ ಮನವಿಯನ್ನು ಸುದೀರ್ಘವಾಗಿ ಚರ್ಚಿಸಿದ ಸಭೆಯು ಈ ಕೆಳಕಂಡಂತೆ ತೀರ್ಮಾನಿಸಿತು. |
| ತೀರ್ಮಾನ | ಡಾ. ಎಸ್. ಶ್ರೀಕಂಠಸ್ವಾಮಿ, ನಿರ್ದೇಶಕರು, ಕಾಲೇಜು ಅಭಿವೃದ್ಧಿ ಮಂಡಳಿ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು ಇವರ ಸೇವಾವಧಿಯು ದಿನಾಂಕ 16-07-2020ಕ್ಕೆ ಅಂತ್ಯವಾಗುತ್ತಿರುವ ಹಿನ್ನೆಲೆಯಲ್ಲಿ ಅಧಿನಿಯಮಾನುಸಾರ ಜಾಹಿರಾತು ಹೊರಡಿಸಿ ಆ ಮೂಲಕ ಅರ್ಹ ಅಭ್ಯರ್ಥಿಗಳಿಂದ ಅರ್ಜಿ ಆಹ್ವಾನಿಸಿ ನಿರ್ದೇಶಕರ ಹುದ್ದೆಗೆ ನೇಮಕಮಾಡಲು ತೀರ್ಮಾನಿಸಿತು. ಮುಂದುವರೆದು, ಪ್ರಸ್ತುತ ನಿರ್ದೇಶಕ ಹುದ್ದೆಯ ಕಾರ್ಯಭಾರವನ್ನು ಮುಂದಿನ ಸಿಂಡಿಕೇಟ್‌ನ ತೀರ್ಮಾನದವರೆಗೆ ತಾತ್ಕಾಲಿಕವಾಗಿ ಶ್ರೀಯುತರನ್ನು ಕಾಲೇಜು ಅಭಿವೃದ್ಧಿ ಮಂಡಳಿಯ ನಿರ್ದೇಶಕರನ್ನಾಗಿ ಮುಂದುವರೆಸಲು ಸಭೆಯು ತೀರ್ಮಾನಿಸಿತು. |
| **2020/7.17** | ಜೈವಿಕ ತಂತ್ರಜ್ಞಾನ ಅಧ್ಯಯನ ವಿಭಾಗದಲ್ಲಿ ಕಾರ್ಯಗತಗೊಂಡಿರುವ ಐಸಿಎಆರ್ ಡಿಎಂಆರ್ಎಲ್ ಯೋಜನೆಯನ್ನು ಹಾಗೂ ಯೋಜನೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ತಾತ್ಕಾಲಿಕ ಸಿಬ್ಬಂದಿಗಳ ಸೇವೆಯನ್ನು 2020-21ನೇ ಸಾಲಿನಿಂದ ಮುಂದಿನ ಯೋಜನಾ ಅವಧಿಯವರೆಗೆ ಮುಂದುವರಿಸುವ ಬಗ್ಗೆ. |
| ತೀರ್ಮಾನ | ಮುಂದುವರೆಸುವ ಸಂಬಂಧ ಆದೇಶ ಹೊರಡಿಸಲು ಸಹ ತೀರ್ಮಾನಿಸಲಾಯಿತು. ದಿನಾಂಕ 15-06-2020ರ ಪತ್ರದಲ್ಲಿ ಯೋಜನಾ ಸಂಯೋಜಕರು, ಐಸಿಎಆರ್-ಎಐಸಿಆರ್‌ಪಿ, ಜೋಧ್‌ಪುರ್ ಅವರು ತಿಳಿಸಿರುವಂತೆ ವಿಶ್ವವಿದ್ಯಾನಿಲಯದಲ್ಲಿ ಕಾರ್ಯಗತಗೊಂಡಿರುವುದನ್ನು |

| | |
|---|---|
| | ಗಮನಿಸಿದ ಸಿಂಡಿಕೇಟ್ ಐಸಿಎಆರ್ ನಿಂದ ಅನುದಾನ ಬರುತ್ತಿರುವುದರಿಂದ, ಸದರಿ ಯೋಜನೆಯನ್ನು 2020-2021ನೇ ಸಾಲಿನಿಂದ ಮುಂದಿನ ಯೋಕಜಾ ಅವಧಿಯವರೆವಿಗೆ ಮುಂದುವರಿಸಲು ಹಾಗೂ ಎಸ್. ಚಂದ್ರನಾಯಕ, ಪ್ರಿನ್ಸಿಪಾಲ್ ಸೈಂಟಿಸ್ಟ್ ಅವರನ್ನು ಯೋಜನೆಯ ಮುಕ್ತಾಯದವರೆಗೂ ಪ್ರೊಫೆಸರ್ ಮತ್ತು ಆಫೀಸರ್ ಇನ್‌ಚಾರ್ಜ್ ಎಂಬ ಪದನಾಮದೊಂದಿಗೆ ಮುಂದುವರೆಸಲು, ಸದರಿ ಯೋಜನೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ಇತರೆ ಸಿಬ್ಬಂದಿಗಳ ಸೇವೆಯನ್ನು ಅನುದಾನಿತ ಸಂಸ್ಥೆಯ ಆದೇಶದಂತೆ ಪ್ರೊಫೆಸರ್ ಮತ್ತು ಆಫೀಸರ್ ಇನ್‌ಚಾರ್ಜ್‌ರವರೆ |
| **2020/7.18** | ಪ್ರಾಚ್ಯವಿದ್ಯಾ ಸಂಶೋಧನಾಲಯಕ್ಕೆ ಒಂದು ವರ್ಷದ ಅವಧಿಗೆ ಗೌರವಧನದ ಆಧಾರದ ಮೇಲೆ ವಿದ್ವಾಂಸರುಗಳ ನೇಮಕ ಮಾಡಿಕೊಡುವ ಬಗೆಗೆ |
| ತೀರ್ಮಾನ | ಪ್ರಾಚ್ಯವಿದ್ಯಾ ಸಂಶೋಧನಾಲಯ ಸಂಸ್ಥೆಯನ್ನು ಉನ್ನತೀಕರಿಸುವ ದೃಷ್ಟಿಯಿಂದ ಶ್ರೀ ಮುಮ್ಮಡಿ ಕೃಷ್ಣರಾಜ ಒಡೆಯರ್ ಅವರ ವಿರಚಿತ ಶ್ರೀತತ್ವನಿಧಿಯ 09 ಸಂಪುಟಗಳಲ್ಲಿ ಉಳಿದ 05 ಸಂಪುಟಗಳನ್ನು ಅನುವಾದಿಸಿ, ತಿದ್ದುಪಡಿ ಮಾಡಲು ಮತ್ತು ಇತರೆ ಗ್ರಂಥಗಳನ್ನು ಅನುವಾದಿಸಲು ಸಂಸ್ಥೆಯಲ್ಲಿ ಸೇವೆ ಸಲ್ಲಿಸಿ ಈಗಾಗಲೇ ನಿವೃತ್ತಿ ಹೊಂದಿರುವ ವಿದ್ವಾಂಸರುಗಳನ್ನು ರೂ.60,000/-ಗಳ ಗೌರವಧನದ ಆಧಾರದ ಮೇಲೆ ಒಂದು ವರ್ಷದ ಅವಧಿಗೆ ನೇಮಕ ಮಾಡಿ ಈ ಅವಧಿಯೊಳಗೆ ಹಮ್ಮಿಕೊಳ್ಳಲಾಗಿರುವ ಕೆಲಸಗಳನ್ನು ಪೂರ್ಣಗೊಳಿಸುವಂತೆ ನಿರ್ಧರಿಸಿದ ಸಿಂಡಿಕೇಟ್ ಸದರಿ ವೆಚ್ಚವನ್ನು "ಸಾಮಾನ್ಯ ರೆವಿನ್ಯೂ ಖಾತೆಯ ಇತರೆ ವೆಚ್ಚಗಳು-189" ಶೀರ್ಷಿಕೆಯಿಂದ ಭರಿಸಲು ಸಭೆಯು ಅನುಮೋದಿಸಿತು. |
| **2020/7.19** | ಮೈಸೂರು ವಿಶ್ವವಿದ್ಯಾನಿಲಯದ ಔಟ್ ರಿಚ್ ಮತ್ತು ಸ್ಪೆಷಲೈಜ್ಡ್ ಪ್ರೋಗ್ರಾಂಗಳಲ್ಲಿ Lateral Entry ಮತ್ತು Transfer ಅಡಿಯಲ್ಲಿ ಪ್ರವೇಶಾತಿಯನ್ನು ನೀಡುವ ಬಗೆಗೆ. |
| ತೀರ್ಮಾನ | ದಿನಾಂಕ 18-06-2020ರಂದು ನಡೆದ ಶಿಕ್ಷಣ ಮಂಡಳಿಯ ಸಭೆಯ ಶಿಫಾರಸ್ಸಿನ ಅನ್ವಯ ಮೈಸೂರು ವಿಶ್ವವಿದ್ಯಾನಿಲಯದ ಔಟ್‌ರೀಚ್ ಮತ್ತು ಸ್ಪೆಸಲೈಜ್ಡ್ ಪ್ರೋಗ್ರಾಂಗಳಲ್ಲಿ Lateral Entry ಮತ್ತು Transfer ಅಡಿಯಲ್ಲಿ ಪ್ರವೇಶಾತಿಯನ್ನು ನೀಡಲು ಶಿಕ್ಷಣ ಮಂಡಳಿ ಸಭೆಯ ವರದಿಯಲ್ಲಿನ ಶಿಫಾರಸ್ಸಿನ ಅನ್ವಯ, ಈ ಕೆಳಕಂಡ ಸದಸ್ಯರನ್ನೊಳಗೊಂಡ ಸಮಿತಿಯನ್ನು ರಚಿಸಿರುವುದನ್ನು ಸಿಂಡಿಕೇಟ್ ಸಭೆಯು ಅನುಮೋದಿಸಿತು.<br>1 — Prof.Anand A, BIMS, MGM. — Chairman<br>2 — Prof.Janardhan, G.R, DOS in Botany, MGM. — Member<br>3 — Prof.Chandrashekara M., DOS in Lib.Sci., MGM — Member |
| **2020/7.20** | ಪರಿಷ್ಕೃತ ಎಂ.ಫಿಲ್ ವಿನಿಯಮಾವಳಿಗೆ ಸರ್ಕಾರದ ಅನುಮೋದನೆ ಪಡೆಯುವ ಬಗೆಗೆ. |
| ತೀರ್ಮಾನ | ಎಂ.ಫಿಲ್ ವಿನಿಯಮಾವಳಿಯಲ್ಲಿ ಕೆಲವು ಮಾರ್ಪಾಡುಗಳನ್ನು ಮಾಡಿ, ಉಳಿದಂತೆ ಸದರಿ ವಿನಿಯಮಾವಳಿಯನ್ನೇ ಪ್ರಸ್ತುತ ಸಾಲಿನಲ್ಲಿ ಮುಂದುವರೆಸಲು ದಿನಾಂಕ 18-06-2020ರಂದು ನಡೆದ ವಿದ್ಯಾವಿಷಯಕ್ ಪರಿಷತ್ ಸಭೆಯು ಈಗಾಗಲೇ ಅನುಮತಿಸಿರುವುದನ್ನು ಪರಿಗಣಿಸಿ ಪರಿಷ್ಕರಿಸಲಾದ ಎಂ.ಫಿಲ್ ವಿನಿಯಮಾವಳಿಯನ್ನು ಅನುಮೋದನೆಗಾಗಿ ಸರ್ಕಾರಕ್ಕೆ ಸಲ್ಲಿಸಲು ಸಿಂಡಿಕೇಟ್ ತೀರ್ಮಾನಿಸಿತು. |
| **2020/7.21** | 2020-21ನೇ ಶೈಕ್ಷಣಿಕ ಸಾಲಿಗೆ ವಿಶ್ವವಿದ್ಯಾನಿಲಯದ ವಿವಿಧ ಶುಲ್ಕಗಳನ್ನು ನಿಗದಿಪಡಿಸುವ ಬಗ್ಗೆ. |
| ತೀರ್ಮಾನ | ಕೋವಿಡ್-19 (ಕರೋನಾ ವೈರಾಣು)ವಿನ ಸಾಂಕ್ರಾಮಿಕ ರೋಗವು ಪ್ರಪಂಚದಾದ್ಯಂತ |

| | |
|---|---|
| | ಹರಡುತ್ತಿದ್ದ ನಿಮಿತ್ತ ಕೇಂದ್ರ ಸರ್ಕಾರವು ದೇಶದಾದ್ಯಂತ ಲಾಕ್‌ಡೌನ್ ಘೋಷಿಸಿದ್ದ ಹಿನ್ನೆಲೆಯಲ್ಲಿ ಆರ್ಥಿಕ ಚಟುವಟಿಕೆಗಳು ಕುಂಠಿತಗೊಂಡು ವಿದ್ಯಾರ್ಥಿಗಳ ಪೋಷಕರಿಗೆ ಶುಲ್ಕ ಪಾವತಿಸಲು ಕಷ್ಟಸಾಧ್ಯವಾಗುವುದರಿಂದ 2019–20ನೇ ಶೈಕ್ಷಣಿಕ ಸಾಲಿನಲ್ಲಿದ್ದ ಶುಲ್ಕಗಳನ್ನೇ ಪ್ರಸಕ್ತ ಶೈಕ್ಷಣಿಕ 2020–21ನೇ ಸಾಲಿನಲ್ಲೂ ಅಳವಡಿಸಿಕೊಳ್ಳಲು ಹಾಗೂ ವಿಶ್ವವಿದ್ಯಾನಿಲಯದ ಹಿತದೃಷ್ಟಿಯಿಂದ ವಿದೇಶಿ ವಿದ್ಯಾರ್ಥಿಗಳ ಶುಲ್ಕ ಪರಿಷ್ಕರಣೆಯನ್ನೊಳಗೊಂಡಂತೆ, ಅಲ್ಪ ಬದಲಾವಣೆಗಳನ್ನು ಮಾಡಿ, ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ ಕಾಯ್ದೆ 2000 ಪ್ರಕರಣ 29(ಜಿ) ಅನ್ವಯ ಶುಲ್ಕಗಳನ್ನು 2020–21ನೇ ಸಾಲಿಗೆ ನಿಗದಿಪಡಿಸಿರುವುದನ್ನು ಸಿಂಡಿಕೇಟ್ ಅನುಮೋದಿಸಿತು. |
| **2020/7.22** | 2019–20ನೇ ಶೈಕ್ಷಣಿಕ ಸಾಲಿನಿಂದ ಮಹಾತ್ಮಗ ಾಂಧಿ ಬಿ.ಎಡ್.ಕಾಲೇಜಿನ ಸ್ಥಳ ಬದಲಾವಣೆ ಮಾಡುವ ಬಗ್ಗೆ. |
| ತೀರ್ಮಾನ | ಕಾರ್ಯದರ್ಶಿಗಳು, ಮಹಾತ್ಮ ಗಾಂಧಿ ಬಿ.ಎಡ್., ಕಾಲೇಜ್ ಅನ್ನು 2019–20ನೇ ಶೈಕ್ಷಣಿಕ ಸಾಲಿನಿಂದ ಹಾಲಿ ಇರುವ ಕಟ್ಟಡದಿಂದ ನೂತನವಾಗಿ ನಿರ್ಮಿಸಿರುವ **CA3 &4, Sathagalli bus Depot Complex, Alanhalli, Mahadevapura Ring Road Junction, Sathagalli, Mysore-570019** ಕಟ್ಟಡಕ್ಕೆ ಸ್ಥಳಾಂತರಿಸಲು ಪರಿವೀಕ್ಷಣಾ ಸಮಿತಿಯ ವರದಿಯಲ್ಲಿನ ಶಿಫಾರಸ್ಸಿನ ಅನ್ವಯ ಅನುಮತಿಸಿ ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯ ಕಾಯ್ದೆ 2000 ಪ್ರಕರಣ 59(5)ರ ಮೇರೆಗೆ ಸರ್ಕಾರದ ಅನುಮೋದನೆಗಾಗಿ ಪ್ರಸ್ತಾವನೆಯನ್ನು ಸಲ್ಲಿಸಲು ಸಲ್ಲಿಸಲು ಸಿಂಡಿಕೇಟ್ ತೀರ್ಮಾನಿಸಿತು. |
| **2020/7.23** | ಮೈಸೂರು ವಿಶ್ವವಿದ್ಯಾನಿಲಯ ಮತ್ತು ಕರ್ನಾಟಕ ವಿಜ್ಞಾನ ಮತ್ತು ತಂತ್ರಜ್ಞಾನ ಅಕಾಡೆಮಿ, ಬೆಂಗಳೂರು ಇವರುಗಳ ನಡುವೆ ಒಡಂಬಡಿಕೆ ಮಾಡಿಕೊಂಡಿರುವ ಬಗ್ಗೆ.– ಅನುಸಮರ್ಥನೆಗಾಗಿ. |
| ತೀರ್ಮಾನ | ಮೈಸೂರು ವಿಶ್ವವಿದ್ಯಾನಿಲಯ ಮತ್ತು ಕರ್ನಾಟಕ ವಿಜ್ಞಾನ ಮತ್ತು ತಂತ್ರಜ್ಞಾನ ಅಕಾಡೆಮಿ, ಬೆಂಗಳೂರು ಸಂಸ್ಥೆಗಳ ನಡುವೆ ಈ ಕೆಳಕಂಡ ವಿಷಯಗಳ ಬಗೆಗೆ ಒಡಂಬಡಿಕೆ ಮಾಡಿಕೊಂಡಿರುವ ಪ್ರಸ್ತಾವನೆಯನ್ನು ಸಿಂಡಿಕೇಟ್ ಪರಿಶೀಲಿಸಿ ಅನುಸಮರ್ಥಿಸಿತು.<br>**(1) Inculcating scientific temper across civil society through science communication**<br>**(2) Facilitating technology dissemination through Academia-Farm-Industry interface, with a focus on rural areas**<br>**(3) Fostering innovations and entrepreneurship for societal benefits**<br>**(4) Organising conferences and outreach programmes**<br>**(5) Capacity building in frontier areas of Science and Technology** |
| **2020/7.24** | ರಸರಿಷಿ ರಿಸರ್ಚ್ ಫೌಂಡೇಶನ್ (ಸಾಧನ ಸಂಗಮ ಟ್ರಸ್ಟ್ (ರಿ)), ಸ್ವಾಮಿ ರಾಮಸಾಧನ ಧಾಮ, ಬೆಂಗಳೂರು ಗ್ರಾಮಾಂತರ ಇವರಿಗೆ ಹೊಸದಾಗಿ **Dance, Music and Art Histroy** ವಿಷಯಗಳಲ್ಲಿ ಸಂಶೋಧನೆ ನಡೆಸಲು ಮೈಸೂರು ವಿಶ್ವವಿದ್ಯಾನಿಲಯದಿಂದ ಸಂಶೋಧನಾ ಕೇಂದ್ರದ ಮಾನ್ಯತೆ ನೀಡುವ ಸಂಬಂಧ ಪರಿವೀಕ್ಷಣಾ ಸಮಿತಿ ಸಲ್ಲಿಸಿರುವ ವರದಿಯ ಬಗ್ಗೆ. |
| ತೀರ್ಮಾನ | ರಸರಿಷಿ ರಿಸರ್ಚ್ ಫೌಂಡೇಶನ್ (ಸಾಧನ ಸಂಗಮ ಟ್ರಸ್ಟ್ (ರಿ)), ಸ್ವಾಮಿ ರಾಮಸಾಧನ ಧಾಮ, ಬೆಂಗಳೂರು ಗ್ರಾಮಾಂತರ ಇವರಿಗೆ ಹೊಸದಾಗಿ **Performing Arts** ವಿಷಯಗಳಲ್ಲಿ ಸಂಶೋಧನೆ ನಡೆಸಲು ಮೈಸೂರು ವಿಶ್ವವಿದ್ಯಾನಿಲಯದಿಂದ ಸಂಶೋಧನಾ |

| | |
|---|---|
| | ಕೇಂದ್ರದ ಮಾನ್ಯತೆ ನೀಡುವ ಸಂಬಂಧ ದಿನಾಂಕ 07-07-2020ರಂದು ವಿಶ್ವವಿದ್ಯಾನಿಲಯದ ಪರಿವೀಕ್ಷಣಾ ಸಮಿತಿಯು ಆನ್‌ಲೈನ್ ಮುಖಾಂತರ ಪರಿಶೀಲಿಸಿ ಸಲ್ಲಿಸಿರುವ ವರದಿಯಲ್ಲಿನ ಶಿಫಾರಸ್ಸನ್ನು ಸಿಂಡಿಕೇಟ್ ಅನುಮೋದಿಸಿತು. |
| **2020/7.25** | **SJB College of Management Studies, BGS Health and Education City, Kengeri, Bengaluru,** ಇವರ ಸಂಸ್ಥೆಗೆ ಹೊಸದಾಗಿ **Management and Commerce** ವಿಷಯದಲ್ಲಿ ಸಂಶೋಧನೆ ನಡೆಸಲು, ಮೈಸೂರು ವಿಶ್ವವಿದ್ಯಾನಿಲಯದಿಂದ ಸಂಶೋಧನ ಕೇಂದ್ರದ ಮಾನ್ಯತೆ ನೀಡುವ ಬಗ್ಗೆ – ವಿಶ್ವವಿದ್ಯಾನಿಲಯದ ಪರಿವೀಕ್ಷಣಾ ಸಮಿತಿಯು ಸಲ್ಲಿಸಿರುವ ವರದಿಗೆ ಅನುಮೋದನೆ ಕೋರುವ ಬಗ್ಗೆ. |
| ತೀರ್ಮಾನ | **SJB College of Management Studies, BGS Health and Education City, Kengeri, Bengaluru,** ಇವರ ಸಂಸ್ಥೆಗೆ ಹೊಸದಾಗಿ **Management and Commerce** ವಿಷಯದಲ್ಲಿ ಸಂಶೋಧನೆ ನಡೆಸಲು, ಮೈಸೂರು ವಿಶ್ವವಿದ್ಯಾನಿಲಯದಿಂದ ಸಂಶೋಧನ ಕೇಂದ್ರದ ಮಾನ್ಯತೆ ನೀಡುವ ಸಂಬಂಧ ದಿನಾಂಕ 06-07-2020 ರಂದು ತಜ್ಞರ ಪರಿವೀಕ್ಷಣಾ ಸಮಿತಿಯು ಸಂಸ್ಥೆಯಲ್ಲಿನ ಮೂಲಭೂತ ಸೌಲಭ್ಯಗಳು, ಇತರೆ ಅಗತ್ಯ ಮಾಹಿತಿಗಳನ್ನು ಆನ್‌ಲೈನ್ ಮುಖಾಂತರ ಪರಿಶೀಲಿಸಿ ಸಲ್ಲಿಸಿದ ವರದಿಯಲ್ಲಿನ ಶಿಫಾರಸ್ಸನ್ನು ಸಿಂಡಿಕೇಟ್ ಅನುಮೋದಿಸಿತು. |
| **2020/7.26** | **Srishti College of Commerce and Management (G.K.Educational Trust(R), #784, Ring Road, 7th Block, 2nd Phase, BSK 3rd Stage, Bengaluru-85,** ಸಂಸ್ಥೆಗೆ ಹೊಸದಾಗಿ **Commerce and Management and Computer Science** ವಿಷಯಗಳಲ್ಲಿ ಸಂಶೋಧನೆ ನಡೆಸಲು ಮೈಸೂರು ವಿಶ್ವವಿದ್ಯಾನಿಲಯದಿಂದ ಸಂಶೋಧನ ಕೇಂದ್ರದ ಮಾನ್ಯತೆ ನೀಡುವ ಬಗ್ಗೆ – ವಿಶ್ವವಿದ್ಯಾನಿಲಯದ ಪರಿವೀಕ್ಷಣಾ ಸಮಿತಿಯು ಸಲ್ಲಿಸಿರುವ ವರದಿಗೆ ಅನುಮೋದನೆ ಕೋರುವ ಬಗ್ಗೆ. |
| ತೀರ್ಮಾನ | **Srishti College of Commerce and Management (G.K.Educational Trust(R), #784, Ring Road, 7th Block, 2nd Phase, BSK 3rd Stage, Bengaluru-85,** ಸಂಸ್ಥೆಗೆ ಹೊಸದಾಗಿ **Commerce and Management and Computer Science** ವಿಷಯಗಳಲ್ಲಿ ವಿಶ್ವವಿದ್ಯಾನಿಲಯದ ಪರಿವೀಕ್ಷಣಾ ಸಮಿತಿಯು ದಿನಾಂಕ 06-07-2020ರಂದು ಸಂಸ್ಥೆಯಲ್ಲಿನ ಮೂಲಭೂತ ಸೌಲಭ್ಯಗಳು, ಇತರೆ ಅಗತ್ಯ ಮಾಹಿತಿಗಳನ್ನು ಆನ್‌ಲೈನ್ ಮುಖಾಂತರ ಪರಿಶೀಲಿಸಿ ಸಲ್ಲಿಸಿದ ಸಮಿತಿಯ ಶಿಫಾರಸ್ಸನ್ನು ಸಿಂಡಿಕೇಟ್ ಅನುಮೋದಿಸಿತು. |
| **2020/7.27** | ಮೈಸೂರು ವಿಶ್ವವಿದ್ಯಾನಿಲಯದ ವಸತಿಗೃಹಗಳ ವಿವರಗಳು. |
| | ಡಾ. ಈ.ಸಿ. ನಿಂಗೇರಾಜ್ ಗೌಡ, ಸಿಂಡಿಕೇಟ್ ಸದಸ್ಯರು, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು ಇವರು ಮೈಸೂರು ವಿಶ್ವವಿದ್ಯಾನಿಲಯದ ವಸತಿಗೃಹಗಳಿಗೆ ಸಂಬಂಧಿಸಿದಂತೆ ಕೆಲವು ಮಾಹಿತಿಗಳನ್ನು ಸಭೆಗೆ ಮಂಡಿಸುವಂತೆ ಕೋರಿರುವ ಸಂಬಂಧ, ವಿಶ್ವವಿದ್ಯಾನಿಲಯ ಸಭೆಯಲ್ಲಿ ಮಂಡಿಸಿರುವ ವಸತಿಗೃಹಗಳ ಮಾಹಿತಿಯನ್ನು ಸಭೆಯು ಕೂಲಂಕಷವಾಗಿ ಪರಿಶೀಲಿಸಿ, ಈ ಕೆಳಕಂಡಂತೆ ಚರ್ಚಿಸಿತು.<br>1. ಮೈಸೂರು ವಿಶ್ವವಿದ್ಯಾನಿಲಯದ ವಸತಿಗೃಹಗಳಿಂದ ಬರುವ ವಾರ್ಷಿಕ ಆದಾಯ ಅಂದಾಜು ರೂ.2,58,70,752-00ಗಳಾಗಿದ್ದು, ವಸತಿಗೃಹಗಳ ರಿಪೇರಿ ಖರ್ಚು ಆದಾಯಕ್ಕಿಂತ ಹೆಚ್ಚಾಗಿದ್ದು, ವಿಶ್ವವಿದ್ಯಾನಿಲಯಕ್ಕೆ ಆರ್ಥಿಕ ನಷ್ಟವಾಗಿರುವುದನ್ನು ಸಭೆಯು ಪರಿಶೀಲಿಸಿತು.<br>2. ಡಾ. ಈ.ಸಿ. ನಿಂಗರಾಜ್‌ಗೌಡರವರು ಮಾತನಾಡಿ ಹಳೆಯದಾದ, ಉಪಯೋಗಕ್ಕೆ ಬಾರದ |

| | |
|---|---|
| | ವಸತಿಗೃಹಗಳನ್ನು ಕೆಡವಿ ಹಾಕಬೇಕೆಂದು ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸಿದರು.<br>3. ಮಾನ್ಯ ಕುಲಪತಿಯವರು ಮಾತನಾಡಿ, ಹಿಂದಿನ ಕುಲಪತಿಯವರ ಅವಧಿಯಲ್ಲಿ ಕೆ.ಎಸ್.ಓ.ಯು ತಾತ್ಕಾಲಿಕ ಉದ್ಯೋಗಿಗಳಿಗೆ ವಿಶ್ವವಿದ್ಯಾನಿಲಯದ ವಸತಿಗೃಹಗಳನ್ನು ನೀಡಲಾಗಿದ್ದು, ಅವರುಗಳು ಅವಧಿ ಮುಗಿದಿದ್ದರೂ ವಸತಿಗೃಹಗಳನ್ನು ಖಾಲಿ ಮಾಡದೇ ನ್ಯಾಯಾಲಯಕ್ಕೆ ಮೊರೆ ಹೋಗಿರುವುದನ್ನು ಸಭೆಯ ಗಮನಕ್ಕೆ ತಂದರು.<br>4. ಜೇಷ್ಠತೆಯ ಅನುಸಾರ ವಸತಿಗೃಹಗಳನ್ನು ಹಂಚಿಕೆ ಮಾಡಲಾಗುತ್ತಿದ್ದು, ಖಾಯಂ/ ಅಧ್ಯಾಪಕರು/ ಅಧ್ಯಾಪಕೇತರ ವೃಂದದಿಂದ ಮನವಿ ಇಲ್ಲದಿದ್ದಾಗ ವಸತಿಗೃಹಗಳನ್ನು ಮಾನ್ಯ ಕುಲಪತಿಯವರ ವಿವೇಚಾನುಸಾರ ತಾತ್ಕಾಲಿಕ ಅಧ್ಯಾಪಕ/ಅಧ್ಯಾಪಕೇತರ ಉದ್ಯೋಗಿಗಳಿಗೆ ಹಂಚಿಕೆ ಮಾಡುತ್ತಿದ್ದು, ಸದರಿ ಉದ್ಯೋಗಿಗಳಿಂದ ಬರುವ ಮನೆ ಬಾಡಿಗೆ ಭತ್ಯೆಯು ವಸತಿಗೃಹಗಳ ದುರಸ್ಥಿ ಕಾರ್ಯದ ಮೊತ್ತಕ್ಕಿಂತ ಕಡಿಮೆಯಾಗಿದ್ದು, ವಿಶ್ವವಿದ್ಯಾನಿಲಯಕ್ಕೆ ಆರ್ಥಿಕ ಹೊರೆಯಾಗಿದೆ. ಆದುದರಿಂದ, ಮುಂದಿನ ದಿನಗಳಲ್ಲಿ ತಾತ್ಕಾಲಿಕ ಅಧ್ಯಾಪಕ/ಅಧ್ಯಾಪಕೇತರ ನೌಕರರಿಗೆ ವಸತಿಗೃಹಗಳನ್ನು ಹಂಚಿಕೆ ಮಾಡದಿರಲು ಸಭೆಯು ಅಭಿಪ್ರಾಯಿಸಿತು.<br>5. ಖಾಯಂ ಅಧ್ಯಾಪಕೇತರ ನೌಕರರಿಗೆ ವಿಶ್ವವಿದ್ಯಾನಿಲಯದ ವತಿಯಿಂದ ಹಂಚಿಕೆ ಮಾಡಿರುವ ವಸತಿಗೃಹಗಳಿಗೆ ಮನೆ ಬಾಡಿಗೆ ಭತ್ಯೆಯನ್ನು ಹೆಚ್ಚಳ ಮಾಡಿದರೆ, ಸದರಿ ನೌಕರರುಗಳಿಂದ ಹೆಚ್ಚಳ ಮಾಡಬೇಡಿ ಎಂದು ಮನವಿ ಸಲ್ಲಿಸುತ್ತಾರೆ. ಆದುದರಿಂದ ಸದರಿ ವಸತಿಗೃಹಗಳಿಗೆ ಮನೆ ಬಾಡಿಗೆ ಭತ್ಯೆಯನ್ನು ಹೆಚ್ಚಳ ಮಾಡುವ ಬಗ್ಗೆ ಪರಿಶೀಲಿಸಿ, ಮುಂದಿನ ಕ್ರಮಕೈಗೊಳ್ಳಲಾಗುವುದು ಎಂದು ಮಾನ್ಯ ಕುಲಪತಿಯವರು ಸಭೆಗೆ ಮಾಹಿತಿ ನೀಡಿದರು. |
| ತೀರ್ಮಾನ: | ಮೇಲ್ಕಂಡ ವಿಷಯಗಳ ಬಗ್ಗೆ ಕೂಲಂಕಷವಾಗಿ ಚರ್ಚಿಸಿದ ಸಭೆಯು, ಮೈಸೂರು ವಿಶ್ವವಿದ್ಯಾನಿಲಯದ ವಸತಿಗೃಹಗಳ ಹಂಚಿಕೆ, ಮೇಲ್ವಿಚಾರಣೆ ಹಾಗೂ ಲೈಸೆನ್ಸ್ ಶುಲ್ಕ ವಿಧಿಸುವ ಕುರಿತಂತೆ ಮಾನ್ಯ ಸಿಂಡಿಕೇಟ್ ಸದಸ್ಯರು ಹಾಗೂ ಕಾರ್ಯಪಾಲಕ ಅಭಿಯಂತರನ್ನೊಳಗೊಂಡಂತೆ ಒಂದು ಸಮಿತಿ ಮಾಡಿ ಅದರ ವರದಿಯಂತೆ ಹಂತ ಹಂತವಾಗಿ ಕ್ರಮವಹಿಸಲು ಸಿಂಡಿಕೇಟ್ ತೀರ್ಮಾನಿಸಿತು. |
| **2020/7.28** | ಸ್ಕೂಲ್ ಆಫ್ ಪ್ಲಾನಿಂಗ್ ಅಂಡ್ ಆರ್ಕಿಟೆಕ್ಚರ್ ವಿಭಾಗದ ಖಾಯಂ ಪ್ರಾಧ್ಯಾಪಕರಿಗೆ ಸೇವಾ ಸೌಲಭ್ಯವನ್ನು ಒದಗಿಸುವ ಬಗ್ಗೆ. |
| | ಡಾ. ಎಂ.ಎಸ್. ದಾಮೋಧರ, ಮಾನ್ಯ ಸಿಂಡಿಕೇಟ್ ಸದಸ್ಯರು, ಇವರು ಸ್ಕೂಲ್ ಆಫ್ ಪ್ಲಾನಿಂಗ್ ಅಂಡ್ ಆರ್ಕಿಟೆಕ್ಚರ್ ವಿಭಾಗದ ಖಾಯಂ ಪ್ರಾಧ್ಯಾಪಕರಿಗೆ ಸೇವಾ ಸೌಲಭ್ಯವನ್ನು ಒದಗಿಸುವ ಸಂಬಂಧ, ಚರ್ಚಿಸುವ ಸಂಬಂಧ ಇ–ಮೇಲ್ ಮೂಲಕ ಕೋರಿರುವ ವಿಷಯದ ಬಗ್ಗೆ ಸಭೆಯಲ್ಲಿ ಈ ಕೆಳಕಂಡಂತೆ ಚರ್ಚಿಸಲಾಯಿತು.<br>1. ವಿಶ್ವವಿದ್ಯಾನಿಲಯದಲ್ಲಿ ಬೋಧಕ ಅಥವಾ ಬೋಧಕೇತರ ಖಾಯಂ ಉದ್ಯೋಗಿಗಳು ನೇಮಕಗೊಂಡು ಕರ್ತವ್ಯಕ್ಕೆ ವರದಿ ಮಾಡಿಕೊಂಡ ನಂತರ ನಿಯಮಾನುಸಾರ ಅವರುಗಳಿಗೆ ಪ್ರತ್ಯೇಕವಾಗಿ ಸೇವಾ ಪುಸ್ತಕಗಳನ್ನು ತೆರೆದು ನಿಯಮಾನುಸಾರ ವಾರ್ಷಿಕ ವೇತನ ಬಡ್ತಿ, ಕಾಲಕಾಲಕ್ಕೆ ಸರ್ಕಾರವು ಘೋಷಿಸುವ ತುಟ್ಟಿಭತ್ಯೆ ಮತ್ತು ಅವರ ಹಕ್ಕಿಗೆ ಬರುವಂತಹ ರಜೆಯ ವಿವರಗಳನ್ನು ಸೇವಾ ಪುಸ್ತಕದಲ್ಲಿ ದಾಖಲಿಸಿ ಅದರ ಸೌಲಭ್ಯಗಳನ್ನು ಉದ್ಯೋಗಿಗಳಿಗೆ ನೀಡುವುದು ಆ ವಿಭಾಗದ ಬಟವಾಡೆ ಅಧಿಕಾರಿಗಳ ಕರ್ತವ್ಯವಾಗಿರುತ್ತದೆ.<br>2. ಸ್ಕೂಲ್ ಆಪ್ ಪ್ಲಾನಿಂಗ್ ಅಂಡ್ ಆರ್ಕಿಟೆಕ್ಚರ್ ವಿಭಾಗವು ಸ್ವಯಂ ಆರ್ಥಿಕ ಯೋಜನೆಯಡಿಯಲ್ಲಿ ಸ್ಥಾಪಿತವಾಗಿದ್ದು, ವಿಭಾಗದ ಖಾಯಂ ಅಧ್ಯಾಪಕರುಗಳಿಗೆ ಸೇವಾ |

| | |
|---|---|
| | ಪುಸ್ತಕಗಳನ್ನು ತೆರೆಯುವುದು, ನಿಯಮಾನುಸಾರ ವಾರ್ಷಿಕ ವೇತನ ಬಡ್ತಿಗಳನ್ನು ಮಂಜೂರು ಮಾಡಿ ಕಾಲಕಾಲಕ್ಕೆ ಸರ್ಕಾರದ ಆದೇಶದನ್ವಯ ವಿಶ್ವವಿದ್ಯಾನಿಲಯವು ಹೊರಡಿಸಿರುವ ತುಟ್ಟಿ ಭತ್ಯೆ ಆದೇಶಗಳ ಅನುಸಾರ ಕ್ರಮಕೈಗೊಳ್ಳುವುದು, ರಜೆಯ ವಿವರಗಳನ್ನು ಸೇವಾ ಪುಸ್ತಕದಲ್ಲಿ ದಾಖಲಿಸುವುದು ಹಾಗೂ ಸಂಸ್ಥೆಯ ಹಣಕಾಸಿನ ಸ್ಥಿತಿಗತಿಗಳನ್ನು ಅವಲೋಕಿಸಿ, ಅಧ್ಯಾಪಕರುಗಳಿಗೆ ವಿ.ವಿ.ನಿಲಯದ ಅಧಿಸೂಚನೆಯಂತೆ ಯು.ಜಿ.ಸಿ. 7ನೇ ಆಯೋಗದ ವೇತನವನ್ನು ಜಾರಿಗೊಳಿಸುವುದು ನಿರ್ದೇಶಕರ ಕರ್ತವ್ಯವಾಗಿದ್ದು, ಸೇವಾ ಪುಸ್ತಕವನ್ನು ತೆರೆಯಲು ಅವರ ಹಕ್ಕಿಗೆ ಬರುವಂತಹ ರಜೆ ಸೌಲಭ್ಯಗಳಿಗೆ ಪ್ರತ್ಯೇಕವಾಗಿ ಆದೇಶ ನೀಡಲು ಬರುವುದಿಲ್ಲವಾದ್ದರಿಂದ, ಅಲ್ಲಿನ ಬಟವಾಡೆ ಅಧಿಕಾರಿಗಳಾದ ನಿರ್ದೇಶಕರವರೇ ಕೆ.ಸಿ.ಎಸ್.ಆರ್. ನಿಯಮದಂತೆ ಕ್ರಮ ವಹಿಸುವಂತೆ ಹಲವು ಬಾರಿ ಪತ್ರದ ಹಿಂಬರಹದಲ್ಲಿ ಬರೆದು ಕಳುಹಿಸಿದ್ದರೂ, ಇದುವರೆವಿಗೂ ನಿರ್ದೇಶಕರು ಕ್ರಮವಹಿಸಿಲ್ಲದಿರುವುದರನ್ನು ಸಭೆಯು ಪರಿಶೀಲಿಸಿತು. |
| ತೀರ್ಮಾನ: | ಮೇಲ್ಕಂಡ ವಿಷಯಗಳ ಬಗ್ಗೆ ಕೂಲಂಕಷವಾಗಿ ಪರಿಶೀಲಿಸಿ, ಚರ್ಚಿಸಿದ ಸಭೆಯು ಇಬ್ಬರು ಮಾನ್ಯ ಸಿಂಡಿಕೇಟ್ ಸದಸ್ಯರನ್ನೊಳಗೊಂಡ ಶೈಕ್ಷಣಿಕ ಸಲಹಾ ಸಮಿತಿ ಸದಸ್ಯರನ್ನು ನೇಮಕ ಮಾಡಿ, **Advisory Committee** (ಸಲಹಾ ಸಮಿತಿ) ಯನ್ನು ರಚನೆ ಮಾಡಬೇಕೆಂದು ಸಿಂಡಿಕೇಟ್ ಸಭೆಯಲ್ಲಿ ನಿರ್ಧರಿಸಲಾಯಿತು. |
| **2020/7.29** | ಡಾ. ಈ.ಸಿ.ನಿಂಗರಾಜ್ ಗೌಡ, ಮಾನ್ಯ ಸಿಂಡಿಕೇಟ್ ಸದಸ್ಯರು, ಇವರು ಮಾಹಿತಿ ವಿಜ್ಞಾನ ಮತ್ತು ತಂತ್ರಜ್ಞಾನ ಕೇಂದ್ರದ ಸಂಬಂಧ ಮಾಹಿತಿಯನ್ನು ಕೋರಿರುವ ಬಗ್ಗೆ. |

| | | |
|---|---|---|
| 01 | ಮೈಸೂರು ವಿಶ್ವವಿದ್ಯಾನಿಲಯದ ಮಾಹಿತಿ ವಿಜ್ಞಾನ ಮತ್ತು ತಂತ್ರಜ್ಞಾನ ಕೇಂದ್ರ ಪ್ರಾರಂಭವಾಗಿದ್ದು ಯಾವಾಗ ? | ದಿನಾಂಕ 28.07.2001ರಲ್ಲಿ ಪ್ರಾರಂಭವಾಗಿದೆ. |
| 02 | ಸಿಸ್ಟ್‌ನಲ್ಲಿ ಸರ್ಕಾರದಿಂದ ಅನುಮೋದನೆಗೊಂಡಿರುವ ಒಟ್ಟು ಬೋಧಕ ಮತ್ತು ಬೋಧಕೇತರ ಹುದ್ದೆಗಳೆಷ್ಟು? | ಸಿಸ್ಟ್ ಕೇಂದ್ರಕ್ಕೆ ಸರ್ಕಾರದಿಂದ ಯಾವುದೇ ಮಂಜೂರಾದ ಹುದ್ದೆಗಳು ಇರುವುದಿಲ್ಲ. |
| 03 | ಈಗ ಮಾಹಿತಿ ವಿಜ್ಞಾನ ಮತ್ತು ತಂತ್ರಜ್ಞಾನ ಕೇಂದ್ರದಲ್ಲಿ ಒಟ್ಟು ಎಷ್ಟು ಜನ ಬೋಧಕ ಮತ್ತು ಬೋಧಕೇತರರು ಕಾರ್ಯ ನಿರ್ವಹಿಸುತ್ತಿದ್ದಾರೆ? ಮತ್ತು ಅವರಿಗೆ ನೀಡುತ್ತಿರುವ ವೇತನ ವಿವರ ನೀಡಿ. | ಪ್ರಸ್ತುತ 05 ಮಂದಿ ಬೋಧಕರು ಮತ್ತು 10 ಮಂದಿ ಬೋಧಕೇತರರು ಕಾರ್ಯ ನಿರ್ವಹಿಸುತ್ತಿದ್ದಾರೆ. ಇವರುಗಳ ವೇತನದ ವಿವರವನ್ನು ಅನುಬಂಧ–ಅ ನಲ್ಲಿ ಮಂಡಿಸಿದೆ. |
| 04 | ಮೈ.ವಿ.ವಿ.ನಿಲಯದ ಗಣಕ ಕೇಂದ್ರ ಮತ್ತು ಮಾಹಿತಿ ವಿಜ್ಞಾನ ಮತ್ತು ತಂತ್ರಜ್ಞಾನ ಕೇಂದ್ರಗಳು ವಿಲೀನವಾದ ನಂತರ ಸರ್ಕಾರದಿಂದ ಅನುಮೋದನೆ–ಗೊಂಡಿರುವ ಬೋಧಕ ಮತ್ತು ಬೋಧಕೇತರ ಹುದ್ದೆಗಳೆಷ್ಟು ? | 07 ಬೋಧಕ ಹುದ್ದೆಗಳು, 11 ಬೋಧಕೇತರ ಹುದ್ದೆಗಳು (ಹುದ್ದೆಗಳ ವಿವರದ ಆದೇಶದ ಪ್ರತಿ ಲಗತ್ತಿಸಿದೆ. ಅನುಬಂಧ–ಆ). |

| | | |
|---|---|---|
| 05 | ಸರ್ಕಾರದಿಂದ ಅನುಮೋದನೆಗೊಂಡಿರುವ ಹುದ್ದೆಗಳನ್ನು ನೇಮಕ ಮಾಡಲು ವಿ.ವಿ.ನಿಲಯದಿಂದ ತೆಗೆದುಕೊಂಡ ಕ್ರಮಗಳೇನು? | ಯಾವುದೇ ಕ್ರಮಗಳನ್ನು ಕೈಗೊಂಡಿರುವುದಿಲ್ಲ. |
| 06 | ಮಾಹಿತಿ ವಿಜ್ಞಾನ ಮತ್ತು ತಂತ್ರಜ್ಞಾನ ಕೇಂದ್ರದ **Governing Council** ಅಸ್ತಿತ್ವದಲ್ಲಿ ಇದೆಯೇ? ಇದ್ದರೆ ಈಗ ಆ ಸಮಿತಿಯಲ್ಲಿ ಯಾರ್ಯಾರು ಇದ್ದಾರೆ? | ಮಾಹಿತಿ ವಿಜ್ಞಾನ ಮತ್ತು ತಂತ್ರಜ್ಞಾನ ಕೇಂದ್ರದ **Governing Council** ಕೆಲವು ವರ್ಷಗಳು ಅಸ್ತಿತ್ವದಲ್ಲಿತ್ತು. ಆದರೆ ಪ್ರಸ್ತುತ ಅಸ್ತಿತ್ವದಲ್ಲಿರುವುದಿಲ್ಲ. |
| 07 | ಈ ಕೇಂದ್ರದಲ್ಲಿ ವಿದ್ಯಾರ್ಥಿಗಳು ಪಿ.ಜಿ.ಡಿಪ್ಲೋಮಾ ಮತ್ತು ಸ್ನಾತಕೋತ್ತರ ಪದವಿಗಳಿಗೆ ಪ್ರವೇಶ ಪಡೆಯಲು ನಿಗದಿಗೊಳಿಸಿರುವ ಕನಿಷ್ಟ ಶೇಕಡವಾರು ಅಂಕಗಳೆಷ್ಟು ? | 1, ಡಿಪ್ಲೋಮಾ ಕೋರ್ಸ್‌ಗಳಿಗೆ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡ ವಿದ್ಯಾರ್ಥಿಗಳಿಗೆ ಶೇಕಡ 35% ಹಾಗೂ ಸಾಮಾನ್ಯ ವರ್ಗದ ವಿದ್ಯಾರ್ಥಿಗಳಿಗೆ ಶೇಕಡ 40% ಅಂಕಗಳನ್ನು ನಿಗಧಿಪಡಿಸಿದೆ.<br>2. ಸ್ನಾತಕೋತ್ತರ ಪದವಿಗಳಿಗೆ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡ ವಿದ್ಯಾರ್ಥಿಗಳಿಗೆ ಶೇಕಡ 40% ಹಾಗೂ ಸಾಮಾನ್ಯ ವರ್ಗದ ವಿದ್ಯಾರ್ಥಿಗಳಿಗೆ ಶೇಕಡ 45% ಅಂಕಗಳನ್ನು ನಿಗಧಿಪಡಿಸಿದೆ. |
| 08 | ಈ ಕೇಂದ್ರದಲ್ಲಿ ವ್ಯಾಸಂಗ ಮಾಡುವ ವಿದ್ಯಾರ್ಥಿಗಳಿಗೆ/ ವಿದ್ಯಾರ್ಥಿನಿಯರಿಗೆ ವಿ.ವಿ.ನಿಲಯದ ವಿದ್ಯಾರ್ಥಿನಿಲಯಗಳಲ್ಲಿ ಪ್ರವೇಶ ನೀಡಲಾಗುತ್ತಿದೆಯೇ? | ಈ ಕೇಂದ್ರದಲ್ಲಿ ವ್ಯಾಸಂಗ ಮಾಡುವ ವಿದ್ಯಾರ್ಥಿಗಳಿಗೆ/ ವಿದ್ಯಾರ್ಥಿನಿಯರಿಗೆ ವಿ.ವಿ.ನಿಲಯದ ವಿದ್ಯಾರ್ಥಿನಿಲಯಗಳಲ್ಲಿ ಪ್ರವೇಶ ನೀಡುತ್ತಿದ್ದು, ಆದರೆ ವಸತಿ ಸೌಕರ್ಯಗಳನ್ನು ಸರಿಯಾದ ರೀತಿಯಲ್ಲಿ ನೀಡುತ್ತಿಲ್ಲ. ಊಟದ ವ್ಯವಸ್ಥೆಯನ್ನು ಮಾತ್ರ ನೀಡುತ್ತಿದ್ದಾರೆ. ಸರ್ಕಾರದಿಂದ ಮಂಜೂರಾದ ವಸತಿ ಮತ್ತು ನಿಲಯ ಭತ್ಯೆಯನ್ನು ಸಿಸ್ಟ್ ತಪ್ಪದೇ ವಿದ್ಯಾರ್ಥಿಗಳಿಗೆ ಪಾವತಿಸುತ್ತಿದೆ. |

ಮಾನ್ಯ ಸಿಂಡಿಕೇಟ್ ಸದಸ್ಯರಾದ ಡಾ.ಈ.ಸಿ.ನಿಂಗರಾಜ್ ಗೌಡ ಮಾತನಾಡಿ, ಮೈಸೂರು ವಿಶ್ವವಿದ್ಯಾನಿಲಯದ ಗಣಕ ಕೇಂದ್ರ ಮತ್ತು ಮಾಹಿತಿ ವಿಜ್ಞಾನ ಮತ್ತು ತಂತ್ರಜ್ಞಾನ ಕೇಂದ್ರಗಳು ವಿಲೀನವಾದ ನಂತರ ಸರ್ಕಾರದಿಂದ ಅನುಮೋದನೆಗೊಂಡಿರುವ 07 ಬೋಧಕ ಮತ್ತು 11 ಬೋಧಕೇತರ ಹುದ್ದೆಗಳನ್ನು ಭರ್ತಿಮಾಡಲು ಕ್ರಮಕೈಗೊಳ್ಳಬೇಕು. ಈ ಕೇಂದ್ರದಲ್ಲಿ ವಿದ್ಯಾರ್ಥಿಗಳು ಪಿ.ಜಿ.ಡಿಪ್ಲೋಮಾ ಮತ್ತು ಸ್ನಾತಕೋತ್ತರ ಪದವಿಗಳಿಗೆ ಪ್ರವೇಶ ಪಡೆಯಲು ನಿಗದಿಗೊಳಿಸಿರುವ ಕನಿಷ್ಟ ಶೇಕಡವಾರು ಅಂಕಗಳನ್ನು ಶೇಕಡ 35% ರಷ್ಟು ಅಂಕಗಳಿಗೆ ನಿಗದಿಪಡಿಸಬೇಕು. ಈ ಕೇಂದ್ರದಲ್ಲಿ ವ್ಯಾಸಂಗ ಮಾಡುವ ವಿದ್ಯಾರ್ಥಿಗಳಿಗೆ/ ವಿದ್ಯಾರ್ಥಿನಿಯರಿಗೆ ವಿ.ವಿ.ನಿಲಯದ ವಿದ್ಯಾರ್ಥಿನಿಲಯಗಳಲ್ಲಿ ಪ್ರವೇಶ ನೀಡಬೇಕೆಂದು ತಿಳಿಸಿದರು.

**ತೀರ್ಮಾನ:** ಡಾ. ಈ.ಸಿ. ನಿಂಗರಾಜ್ ಗೌಡ, ಮಾನ್ಯ ಸಿಂಡಿಕೇಟ್ ಸದಸ್ಯರು, ಇವರು ತಮ್ಮ ಕೋಷ್ಟಕದಲ್ಲಿ ಕೋರಿರುವ ಮಾಹಿತಿಯನ್ನು ವಿಶ್ವವಿದ್ಯಾನಿಲಯವು ಸಿದ್ಧಪಡಿಸಿ ಸಭೆಗೆ ಮಂಡಿಸಿರುವ

| | |
|---|---|
| | ವಿಷಯವನ್ನು ಗಮನಿಸಿದ ಸಿಂಡಿಕೇಟ್ ಸಭೆಯು ಮೈಸೂರು ವಿಶ್ವವಿದ್ಯಾನಿಲಯದ ಗಣಕ ಕೇಂದ್ರ ಮತ್ತು ಮಾಹಿತಿ ವಿಜ್ಞಾನ ಮತ್ತು ತಂತ್ರಜ್ಞಾನ ಕೇಂದ್ರಗಳು ವಿಲೀನವಾದ ನಂತರ ಸರ್ಕಾರದಿಂದ ಅನುಮೋದನೆಗೊಂಡಿರುವ 07 ಬೋಧಕ ಮತ್ತು 11 ಬೋಧಕೇತರ ಹುದ್ದೆಗಳನ್ನು ಭರ್ತಿಮಾಡಲು ಕ್ರಮಕೈಗೊಳ್ಳಲು;<br>**Board of Studies**ನಲ್ಲಿ ವಿದ್ಯಾರ್ಥಿಗಳು ಪಿ.ಜಿ.ಡಿಪ್ಲೋಮಾ ಮತ್ತು ಸ್ನಾತಕೋತ್ತರ ಪದವಿಗಳಿಗೆ ಪ್ರವೇಶ ಪಡೆಯಲು ನಿಗದಿಗೊಳಿಸಿರುವ ಕನಿಷ್ಟ ಶೇಕಡವಾರು ಅಂಕಗಳನ್ನು ಶೇಕಡ 35% ರಷ್ಟು ಅಂಕಗಳಿಗೆ ನಿಗದಿಪಡಿಸಲು;<br>ಸದರಿ ಕೇಂದ್ರದಲ್ಲಿ ವ್ಯಾಸಂಗ ಮಾಡುವ ವಿದ್ಯಾರ್ಥಿಗಳಿಗೆ ವಿ.ವಿ.ನಿಲಯದ ವಿದ್ಯಾರ್ಥಿನಿಲಯಗಳಲ್ಲಿ ಪ್ರವೇಶ ನೀಡಲು;<br>ಮಾನ್ಯ ಕುಲಪತಿಯವರ ಅಧ್ಯಕ್ಷತೆಯಲ್ಲಿ ಈ ಕೇಂದ್ರದ ನಿರ್ದೇಶಕರು ಸೇರಿದಂತೆ, ಇಬ್ಬರು ಸಿಂಡಿಕೇಟ್ ಸದಸ್ಯರನ್ನೊಳಗೊಂಡ **Governing Council**ಅನ್ನು ರಚಿಸಲು ಸಿಂಡಿಕೇಟ್ ತೀರ್ಮಾನಿಸಿತು. |
| **2020/7.30** | ಉಪಕುಲಸಚಿವ ಹುದ್ದೆಗೆ ಕರ್ನಾಟಕ ಸರ್ಕಾರದ ಸಚಿವಾಲಯದ ಉಪಕಾರ್ಯದರ್ಶಿ ಹುದ್ದೆಗೆ ಇರುವ ವೇತನ ಶ್ರೇಣಿಯನ್ನು ನಿಗದಿಪಡಿಸುವ ಬಗ್ಗೆ. |
| **ತೀರ್ಮಾನ:** | ಮೈಸೂರು ವಿಶ್ವವಿದ್ಯಾನಿಲಯದ ಮಂಜೂರಾದ ಬೋಧಕೇತರ ವರ್ಗದ ಹುದ್ದೆಗಳಿಗೆ ಕರ್ನಾಟಕ ಸರ್ಕಾರದ ಸಚಿವಾಲಯದಲ್ಲಿ ಜಾರಿಯಲ್ಲಿರುವ ವೇತನ ಶ್ರೇಣಿಗಳನ್ನು ಯಥಾವತ್ತಾಗಿ ಅಳವಡಿಸಿಕೊಳ್ಳಲಾಗಿದ್ದು, ಅದರಂತೆ ಹುದ್ದೆಗಳ ವರ್ಗೀಕರಣ ಸಹ ಒಂದೇ ಆಗಿರುತ್ತದೆ. ಪ್ರಸ್ತುತ ಸರ್ಕಾರದ ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ, ಬೆಂಗಳೂರು ಇವರ ಆದೇಶ ಸಂಖ್ಯೆ: ಡಿಪಿಎಆರ್ 105 ಎಸ್ಆರ್‌ಡಿ 2014, ಬೆಂಗಳೂರು ದಿನಾಂಕ 10.07.2019ರ ಆದೇಶದನ್ವಯ ಸರ್ಕಾರದ ಸಚಿವಾಲಯದ ಉಪಕಾರ್ಯದರ್ಶಿಗಳ ಹುದ್ದೆಗೆ ವೇತನ ಶ್ರೇಣಿಯನ್ನು ಪರಿಷ್ಕರಿಸಿರುವ ಹಿನ್ನೆಲೆಯಲ್ಲಿ ಮೈಸೂರು ವಿಶ್ವವಿದ್ಯಾನಿಲಯದ ಉಪಕುಲಸಚಿವ ಹುದ್ದೆಗಳು ಸರ್ಕಾರದ ಸಚಿವಾಲಯದ ಉಪಕಾರ್ಯದರ್ಶಿ ಹುದ್ದೆಗಳಿಗೆ ಸಮಾನವಾಗಿರುತ್ತವೆ. ಆದರೆ ವಿಶ್ವವಿದ್ಯಾನಿಲಯದ ಉಪಕುಲಸಚಿವ ಹುದ್ದೆಯ ವೇತನ ಶ್ರೇಣಿ ರೂ.67550–104600ಗಳಾಗಿದ್ದು, ಸರ್ಕಾರದ ಸಚಿವಾಲಯದ ಉಪಕಾರ್ಯದರ್ಶಿ ಹುದ್ದೆಗೆ ವೇತನ ಶ್ರೇಣಿ ರೂ.74700–109600 ನಿಗಧಿಯಾಗಿದ್ದು ಈ ಎರಡು ಸಮಾನ ಹುದ್ದೆಗಳ ವೇತನ ಶ್ರೇಣಿಯಲ್ಲಿ ವ್ಯತ್ಯಾಸವಿರುವುದರಿಂದ ಸರ್ಕಾರದ ಸುತ್ತೋಲೆ ಸಂಖ್ಯೆ ಸಿಆಸುಇ 17, ಸೇನಿಡಿ 2020 ದಿನಾಂಕ 6–7–2020ರನುಸಾರ ವೃಂದ ಮತ್ತು ನೇಮಕಾತಿ ನಿಯಮಗಳಿಗೆ ತಿದ್ದುಪಡಿ ಮಾಡಿ ಸರ್ಕಾರದ ಅನುಮೋದನೆಗಾಗಿ ಕಳುಹಿಸಲು ಸಿಂಡಿಕೇಟ್ ತೀರ್ಮಾನಿಸಿತು. |
| **2020/7.31** | ವಿಶ್ವವಿದ್ಯಾನಿಲಯದ ಘಟಕ ಕಾಲೇಜಿನ ಅಧ್ಯಾಪಕರುಗಳಿಗೆ ಪ್ರಾಧ್ಯಾಪಕ ಎಜಿಪಿ 10,000ದ ಪದೋನ್ನತಿ ನೀಡುವ ಸಿ.ಎ.ಎಸ್.ಸಮಿತಿಯು ಸಿದ್ದಪಡಿಸಿರುವ ಸ್ಕೋರ್ ಕಾರ್ಡ್ ಅನ್ನು ಸಿಂಡಿಕೇಟ್ ಸಭೆಯ ಅನುಮೋದನೆಗೆ ಮಂಡಿಸುವ ಬಗ್ಗೆ. |
| **ತೀರ್ಮಾನ:** | ವಿಶ್ವವಿದ್ಯಾನಿಲಯದ ಘಟಕ ಕಾಲೇಜುಗಳ ಸಹ ಪ್ರಾಧ್ಯಾಪಕರುಗಳಿಗೆ 2018ರ ಯುಜಿಸಿ ನಿಯಮಾವಳಿಯ ಅನ್ವಯ ಎಜಿಪಿ 10,000(ಲೆವೆಲ್ 14)ದ ಪದೋನ್ನತಿಗೆ ಪರಿಗಣಿಸುವ ಸಲುವಾಗಿ ಅರ್ಜಿಯನ್ನು ಆಹ್ವಾನಿಸಲಾಗಿದ್ದು, ಈ ಕುರಿತು ಸಿಎಎಸ್ ಸಮಿತಿಯು ಅರ್ಜಿಗಳನ್ನು ಪರಿಶೀಲಿಸಿ ನಿಯಮಾವಳಿಯ ಅನ್ವಯ ಎಪಿಐ ಅಂಕಗಳನ್ನು ನೀಡುವ ಬಗ್ಗೆ ಸಿದ್ದಪಡಿಸಿರುವ ಸ್ಕೋರ್ ಕಾರ್ಡ್‌ನ್ನು ಸಿಂಡಿಕೇಟ್ ಸಭೆಯು ಅನುಮೋದಿಸಿತು. |
| **2020/7.32** | **Centre for study of Social Exclusion and Inclusive policy (CSSEIP)** ಕೇಂದ್ರದಲ್ಲಿನ ಬೋಧಕರ ಸೇವೆಯನ್ನು ಮುಂದುವರೆಸುವ ಬಗ್ಗೆ. |

| | |
|---|---|
| | ಡಾ. ಸಿ.ನಂಜುಂಡ, ನಿರ್ದೇಶಕರು (ಪ್ರಭಾರ) ಹಾಗೂ ಸಹ ಪ್ರಾಧ್ಯಾಪಕರು **(temporary & contractual basis) CSSEIP** ಅಧ್ಯಯನ ಕೇಂದ್ರ, ಮಾನಸಗಂಗೋತ್ರಿ, ಮೈಸೂರು ಇವರು ತಮ್ಮ ಪತ್ರದಲ್ಲಿ ಸಾಮಾಜಿಕ ಹೊರಗುಳಿಯುವಿಕೆ ಮತ್ತು ಒಳಗೊಳ್ಳುವಿಕೆ ನೀತಿ ಅಧ್ಯಯನ ಕೇಂದ್ರವನ್ನು ದಿ. 01-04-2020ರಿಂದ 30.09.2020ಕ್ಕೆ ಮುಂದಿನ ಶೈಕ್ಷಣಿಕ ವರ್ಷಕ್ಕೆ ಯುಜಿಸಿ ಹೊರಡಿಸಿರುವ ಸಾರ್ವಜನಿಕ ನೋಟೀಸ್ ಅನುಸಾರ ಮುಂದುರೆಸಲು ಅನುಮತಿ ಕೋರಿರುವುದನ್ನು ಸಭೆಯು ಪರಿಶೀಲಿಸಿತು. |
| ತೀರ್ಮಾನ: | ದಿನಾಂಕ 22-04-2020ರಂದು ಯುಜಿಸಿ ಹೊರಡಿಸಿರುವ ನೋಟಿಸ್‌ನ ಅನುಸಾರ ಕೇಂದ್ರದ ಸಿಬ್ಬಂದಿಗಳ ಸೇವೆಯನ್ನು ದಿನಾಂಕ 30-09-2020ರವರೆಗೆ ಮುಂದುವರೆಸುವಂತೆ ಪ್ರಸ್ತುತ ಕೇಂದ್ರದ ನಿರ್ದೇಶಕರು ಸಲ್ಲಿಸಿರುವ ಮನವಿಯನ್ನು ಸಿಂಡಿಕೇಟ್ ಸಭೆಯು ಅನುಮೋದಿಸಿತು. |
| **2020/7.33** | ಡಾ. ಕೆ.ಬಿ. ಪ್ರವೀಣ, ಸಹ ಪ್ರಾಧ್ಯಾಪಕರು, ಶಿಕ್ಷಣ ಅಧ್ಯಯನ ವಿಭಾಗ, ಮಾನಸಗಂಗೋತ್ರಿ, ಮೈಸೂರು ಇವರನ್ನು ಎರಡು ವರ್ಷಗಳ ಕಾಲ ಮೌಲ್ಯಮಾಪನ ಕಾರ್ಯದಿಂದ ಹೊರಗಿಟ್ಟಿದ್ದ ಆದೇಶವನ್ನು ರದ್ದುಪಡಿಸಿರುವ ಬಗೆಗೆ. |
| ತೀರ್ಮಾನ | ಡಾ. ಕೆ.ಬಿ.ಪ್ರವೀಣ, ಸಹ ಪ್ರಾಧ್ಯಾಪಕರು, ಶಿಕ್ಷಣ ಅಧ್ಯಯನ ವಿಭಾಗ, ಮಾನಸಗಂಗೋತ್ರಿ, ಮೈಸೂರು ಇವರು ತಮ್ಮ ಮನವಿ ಪತ್ರದಲ್ಲಿ ಸಿಂಡಿಕೇಟ್ ಸಭೆಯ ನಿರ್ಣಯದಂತೆ, ದಿನಾಂಕ 07-01-2019ರಂದು ರೂ.20,000/-ಗಳ ದಂಡ ಪಾವತಿಸಿದ್ದು, ಎರಡು ವರ್ಷಗಳ ಅವಧಿಯ ಪರೀಕ್ಷಾ ಕಾರ್ಯಗಳಿಂದ ಹೊರಗಿಡಲಾದ ಅವಧಿಯಲ್ಲಿ ಈಗಾಗಲೇ ಒಂದು ವರ್ಷ ನಾಲ್ಕು ತಿಂಗಳು ಶಿಕ್ಷೆ ಅನುಭವಿಸಿದ್ದು, ಉಳಿಕೆ 08 ತಿಂಗಳ ಅವಧಿಯನ್ನು ಮನ್ನಿಸಿ ಪರೀಕ್ಷಾ ಕಾರ್ಯಗಳಲ್ಲಿ ಪಾಲ್ಗೊಳ್ಳಲು ಅವಕಾಶ ಮಾಡಿಕೊಡಬೇಕೆಂದು ಕೋರಿಕೊಂಡಿರುವುದನ್ನು ಸಭೆಯು ಪರಿಶೀಲಿಸಿದ ಸಭೆಯು ಹಾಲಿ ಶಿಕ್ಷಣಶಾಸ್ತ್ರ ವಿಭಾಗದ ಅಧ್ಯಕ್ಷರಾಗಿರುವುದರಿಂದ, ಪರೀಕ್ಷಾ ಸಂಬಂಧದ ಕಾರ್ಯಚಟುವಟಿಕೆಗಳಲ್ಲಿ ತೊಡಗಿಸಿಕೊಳ್ಳಬೇಕಾದ ಅನಿವಾರ್ಯತೆ ಇರುವ ಹಿನ್ನಲೆಯಲ್ಲಿ ದಿನಾಂಕ 28-04-2020 ರಿಂದ ಜಾರಿಗೆ ಬಂದಂತೆ, ಇನ್ನುಳಿದ ಅವಧಿಗೆ ಸದರಿ ಆದೇಶವನ್ನು ರದ್ದುಗೊಳಿಸಲಾಗಿರುವ ಅಂಶಗಳನ್ನು ಸಿಂಡಿಕೇಟ್ ಪರಿಶೀಲಿಸಿ, ಅನುಸಮರ್ಥಿಸಿತು. |
| **2020/7.34** | **East West Institute of Research and Development, #63, off Magadi Road, Vishwaneedam Post, New BEL Layout, Bengaluru-560091,** ಹೊಸದಾಗಿ **Commerce, management, Microbiology, Chemistry and Botany** ವಿಷಯಗಳಲ್ಲಿ ಸಂಶೋಧನೆ ನಡೆಸಲು ಮೈಸೂರು ವಿಶ್ವವಿದ್ಯಾನಿಲಯದಿಂದ ಸಂಶೋಧನ ಕೇಂದ್ರದ ಮಾನ್ಯತೆ ನೀಡುವ ಬಗ್ಗೆ- ವಿಶ್ವವಿದ್ಯಾನಿಲಯದ ಪರಿವೀಕ್ಷಣಾ ಸಮಿತಿಯು ಸಲ್ಲಿಸಿರುವ ವರದಿಗೆ ಅನುಮೋದನೆ ನಿಡುವ ಬಗ್ಗೆ. |
| ತೀರ್ಮಾನ | **East West Institute of Research and Development, #63, off Magadi Road, Vishwaneedam Post, New BEL Layout, Bengaluru-560091,** ಹೊಸದಾಗಿ **Commerce, management, Microbiology, Chemistry and Botany** ವಿಷಯಗಳಲ್ಲಿ ಸಂಶೋಧನೆ ನಡೆಸಲು ದಿನಾಂಕ 13-07-2020ರಂದು ವಿಶ್ವವಿದ್ಯಾನಿಲಯದ ಪರಿವೀಕ್ಷಣಾ ಸಮಿತಿಯು ಮೂಲಸೌಕರ್ಯಗಳನ್ನು ಹೊಂದಿರುವ ಬಗ್ಗೆ ಆನ್‌ಲೈನ್ ಮುಖಾಂತರ ಪರಿಶೀಲಿಸಿದ ಸಮಿತಿಯು ಸಲ್ಲಿಸಿದ ವರದಿಯಲ್ಲಿನ ಶಿಫಾರಸ್ಸಿನನ್ವಯ ಸಂಶೋಧನಾ ಕಾರ್ಯಕ್ಕಾಗಿ ಮಾನ್ಯತೆ ನೀಡಲು ಸಿಂಡಿಕೇಟ್ ಅನುಮೋದಿಸಿತು. |

| | |
|---|---|
| **2020/7.35** | **2019–20ನೇ ಸಾಲಿನ ವಿಶ್ವವಿದ್ಯಾನಿಲಯದ ವಾರ್ಷಿಕ ಲೆಕ್ಕಪತ್ರಗಳು** |
| | **ವಿಶ್ವವಿದ್ಯಾನಿಲಯದ 2019–20ನೇ ಸಾಲಿನ ವಾರ್ಷಿಕ ಲೆಕ್ಕಪತ್ರಗಳನ್ನು ಸರ್ಕಾರಿ ಲೆಕ್ಕಪರಿಶೋಧಕರಿಂದ ಲೆಕ್ಕತಪಾಸಣೆ ಮಾಡಿಸಲು ವಿಶ್ವವಿದ್ಯಾನಿಲಯದ ಕಾಯ್ದೆ 2000 ಸೆಕ್ಷನ್ 47(2) ಪ್ರಕಾರ ಪ್ರಾಧಿಕಾರಗಳ ಅನುಮೋದನೆಯ ಅವಶ್ಯಕತೆಯಿರುವುದರಿಂದ ಸಿದ್ದಪಡಿಸಲಾಗಿರುವ 2019–20ನೇ ವಾರ್ಷಿಕ ಲೆಕ್ಕಪತ್ರಗಳನ್ನು ಪರಿಶೀಲಿಸಿದ ಸಿಂಡಿಕೇಟ್ ಅನುಮೋದಿಸಿತು.** |
| **2020/7.36** | **Proposal to invite Industries to the Campus for the Skill Training and R & D project** |
| **Decision:** | **After lengthy discussion, the Syndicate has permitted to establish Centre of Excellence and IBM Innovation Centre for Education (ICE) and Generic Software Industry SAP (System application) in the University Campus in order to train the campus students and the student of affiliated college and also resolved to bear the expenditure from the RUSA grants allotted to University or from ICD grants in this behalf and as per KTPP Act tender be floated through CPDPS to establish the above.** |
| **2020/7.37** | **ವಿಶ್ವವಿದ್ಯಾನಿಲಯದ ಪ್ರಸಾರಾಂಗದ ನಿರ್ದೇಶಕರ ಹುದ್ದೆಗೆ ನೇಮಿಸುವ ಬಗ್ಗೆ.** |
| **ತೀರ್ಮಾನ:** | **ಮುಂದೂಡಲಾಯಿತು.** |
| **2020/7.38** | **ಎಸ್.ಜೆ.ಸಿ.ಇ ಆವರಣದಲ್ಲಿರುವ ಮೈಸೂರು ವಿಶ್ವವಿದ್ಯಾನಿಲಯಕ್ಕೆ ಸೇರಿದ ನೀರಿನ ಟ್ಯಾಂಕ್‌ನ್ನು ಜೆ.ಎಸ್.ಎಸ್. ಸಂಸ್ಥೆಯ ವಶಕ್ಕೆ ವಹಿಸಿಕೊಡುವ ಬಗ್ಗೆ.** |
| **ತೀರ್ಮಾನ** | **ಎಸ್.ಜೆ.ಸಿ.ಇ ಆವರಣದಲ್ಲಿರುವ ಮೈಸೂರು ವಿಶ್ವವಿದ್ಯಾನಿಲಯಕ್ಕೆ ಸೇರಿದ ನೀರಿದ ಓವರ್‌ಹೆಡ್ ಟ್ಯಾಂಕ್ ತುಂಬಾ ಶಿಥಿಲಾವಸ್ಥೆಯಲ್ಲಿದ್ದು, ಈ ಟ್ಯಾಂಕ್‌ಗೆ ಹೊಂದಿಕೊಂಡಂತಿರುವ ವಿಶೇಷಚೇತನದ ಪಾಲಿಟೆಕ್ನಿಕ್, ಮಹಿಳಾ ಪಾಲಿಟೆಕ್ನಿಕ್ ಮತ್ತು ಎಸ್.ಜೆ.ಸಿ.ಇ ಮಹಿಳಾ ವಿದ್ಯಾರ್ಥಿನಿಲಯಗಳಿದ್ದು, ಏನಾದರೂ ಅವಗಡ/ದುರಂತಗಳು ಸಂಭವಿಸಬಹುದಾದ ಹಿನ್ನೆಲೆಯಲ್ಲಿ, ಸದರಿ ಓವರ್‌ಹೆಡ್ ಟ್ಯಾಂಕನ್ನು ಜೆ.ಎಸ್.ಎಸ್. ಸಂಸ್ಥೆಗೆ ಬಿಟ್ಟುಕೊಡುವಂತೆ ಕೋರಿರುವ ಮನವಿಯನ್ನು ಸಿಂಡಿಕೇಟ್ ಸಭೆಯು ಪರಿಶೀಲಿಸಿ ಅನುಮೋದಿಸಿತು.** |

**ಇತರೆ ವಿಷಯಗಳು:–**

**1) ಮಾನ್ಯ ಸದಸ್ಯರಾದ ಪ್ರೊ. ಡಿ. ಆನಂದ, ಡಾ. ಈ. ಸಿ. ನಿಂಗರಾಜ್‌ಗೌಡ ಹಾಗೂ ಡಾ. ಎಸ್. ಡಿ. ದೊಡ್ಡಚಾರಿರವರು ಮಾತನಾಡಿ, ವಿಶ್ವವಿದ್ಯಾನಿಲಯದ ಅಧ್ಯಾಪಕರುಗಳು CAS ಅಡಿಯಲ್ಲಿ ತಮಗೆ ಪದೋನ್ನತಿ ನೀಡಿದ್ದು ಹಿಂಬಾಕಿಯನ್ನು ನೀಡಿರುವುದಿಲ್ಲವಾದ್ದರಿಂದ 7ನೇ ವೇತನ ಶ್ರೇಣಿಯ ವ್ಯತ್ಯಾಸದ ಮೊತ್ತವನ್ನು ಮಾತ್ರ ಪದೋನ್ನತಿ ಹೊಂದಿದ ದಿನಾಂಕದಿಂದ ನೀಡುವಂತೆ ಕೋರಿರುವುದನ್ನು ಸಭೆಯ ಗಮನಕ್ಕೆ ತಂದರು. ಆದ್ದರಿಂದ ಸಿಂಡಿಕೇಟ್ ನಿರ್ಣಯದ ದಿನಾಂಕದಿಂದ ಹಿಂಬಾಕಿ ನೀಡಿರುವುದನ್ನು ಪರಿಶೀಲಿಸಲು ಕೋರಿದರು. ಕರ್ನಾಟಕದ ಬೇರೆ ರಾಜ್ಯ ವಿಶ್ವವಿದ್ಯಾಲಯಗಳಲ್ಲಿ ಅಧ್ಯಾಪಕ/ಪ್ರಾಧ್ಯಾಪಕರು ಅರ್ಹತೆ ಹೊಂದಿದ ದಿನಾಂಕದಿಂದಲೇ ವೇತನ ವ್ಯತ್ಯಾಸವನ್ನು ನೀಡಿರುವುದನ್ನು ಸಹ ಸಭೆಯ ಗಮನಕ್ಕೆ ತಂದರು.**

**ಮಾನ್ಯ ಕುಲಪತಿಯವರು ಪ್ರತಿಕ್ರಿಯಿಸಿ ಸದರಿ ಅಧ್ಯಾಪಕರುಗಳು CAS ನಲ್ಲಿ ಪದೋನ್ನತಿ ಹೊಂದುವ ಬಗ್ಗೆ ಮಾತ್ರ ಕೋರಿ ಮನವಿ ಸಲ್ಲಿಸಿದ್ದುದರಿಂದ, ಅವರುಗಳಿಗೆ ಪದೋನ್ನತಿ ನೀಡಲಾಗಿದೆ. ಈಗ ಅವರುಗಳು**

**Arrears** (7ನೇ ವೇತನದ ವ್ಯತ್ಯಾಸದ ಮೊತ್ತ ಮಾತ್ರ)ವನ್ನು ಪದೋನ್ನತಿ ಹೊಂದಿದ ದಿನಾಂಕದಿಂದ ಅನ್ವಯವಾಗುವಂತೆ ಬಿಡುಗಡೆ ಮಾಡಲು ಕೋರಿರುವುದರ ಬಗ್ಗೆ ಮುಂದಿನ ಸಿಂಡಿಕೇಟ್ ಸಭೆಯಲ್ಲಿ ಸವಿವರವಾಗಿ ಮಂಡಿಸಿ, ಚರ್ಚಿಸಿದ ನಂತರ ಮುಂದಿನ ಕ್ರಮಕೈಗೊಳ್ಳಲಾಗುವುದೆಂದು ತಿಳಿಸಿದರು. ಈ ಕುರಿತು ಸರ್ಕಾರದ ಮತ್ತು ಸಿಂಡಿಕೇಟ್ ಒಪ್ಪಿಗೆಯ ಅವಶ್ಯಕತೆಯೂ ಇದೆಯೆಂದ ಮಾನ್ಯ ಕುಲಪತಿಯವರ ನಿರ್ಣಯವನ್ನು ಸಭೆಯು ಅನುಮೋದಿಸಿತು.

2) ಮಾನ್ಯ ಸದಸ್ಯರಾದ ಪ್ರೊ.ಎಸ್.ಡಿ.ದೊಡ್ಡಚಾರಿ ಹಾಗೂ ಡಾ.ಎಂ.ಎಸ್.ದಾಮೋದರ್ ಇವರುಗಳು ಮಾತನಾಡಿ, ಸಿಂಡಿಕೇಟ್ ಸದಸ್ಯರುಗಳಿಗೆ ಒಂದು ಕೊಠಡಿ ಹಾಗೂ ಗುರುತಿನ ಚೀಟಿಯನ್ನು **(Identity Card)** ಅನ್ನು ನೀಡುವ ಬಗ್ಗೆ ಸಭೆಯಲ್ಲಿ ಕೋರಿದಾಗ, ಮಾನ್ಯ ಕುಲಪತಿಯವರು ಸದ್ಯದಲ್ಲೇ ವ್ಯವಸ್ಥೆ ಮಾಡುವುದಾಗಿ ತಿಳಿಸಿದರು.

ಕೊನೆಯಲ್ಲಿ ಸಭೆಯ ಅಧ್ಯಕ್ಷರು ಹಾಗೂ ಮಾನ್ಯ ಕುಲಪತಿಗಳು ಸಭೆಯಲ್ಲಿ ಭಾಗವಹಿಸಿದಂತಹ ಎಲ್ಲಾ ಸದಸ್ಯರುಗಳಿಗೆ ವಂದನೆಗಳನ್ನು ಸಲ್ಲಿಸುವ ಮೂಲಕ ಸಭೆಯು ಮುಕ್ತಾಯವಾಯಿತು.

| | |
|---|---|
| ಸಹಿ/- | ಹಿ/- |
| ಕುಲಸಚಿವ ಮತ್ತು ಸದಸ್ಯ ಕಾರ್ಯದರ್ಶಿ | ಕುಲಪತಿ ಮತ್ತು ಅಧ್ಯಕ್ಷರು |